1930

G.R
ನಂ 2144

A No. 7965

B/520

Acc. No 026

ಶಿವಾನುಭವ ಗ್ರಂಥಮಾಲಾ ಸಂ. ೨೨.

ಶ್ರೀ

# ಸಕಲೇಶ ಮಾದರಸನ

## ವಚನಗಳು.

033:165ak
Hal
7965

The Vijay C[illegible]
LIBRARY
VIJAY COL[illegible]
BIJAPUR.

ಸಂಪಾದಕರು

ರಾ|| ಬ|| ಫ. ಗು. ಹಳಕಟ್ಟಿ,

ಬಿ. ಎ. ಎಲ್. ಎಲ್. ಬಿ.

ವಿಜಾಪುರ.

---

ಗ್ರಂಥಾಲಯ

ಬಿ. [illegible]. ಡಿ. [illegible]. ಸಂಸ್ಥೆ

[illegible] ಹಂಚಿಯಿಂದ ಮಾನ್ಯತೆ ಪಡೆದ

[illegible] ಸಂಶೋಧ[illegible]

(ಇದರ ಯಾವತ್ತು ಅಧಿಕಾರವು ಕಾದಿಡಲ್ಪಟ್ಟಿದೆ)

05P1

ACC.NO
026

ಇವನ್ನು ವಿಜಾಪುರದಲ್ಲಿ ರಾ|| ಬ|| ಫ. ಗು. ಹಳಕಟ್ಟಿ ಇವರು ತಮ್ಮ
“ ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ ” ನಲ್ಲಿ ಮುದ್ರಿಸಿದರು
ಮತ್ತು ಅವರು ಅಲ್ಲಿಯೇ ಪ್ರಕಟಿಸಿದರು.

7965

ಗ್ರಂಥಾಲಯ
ಬಿ. . ಡಿ. ಇ. ಸಂಸ್ಥೆ
ದಿಂದ ಮಾನ್ಯತೆ ಪಡೆದ
ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರ

The Vijay College
Library
VIJAY COLLEGE
BIJAPUR

# ಪ್ರಸ್ತಾವನೆ

ನಾವು ಈಗ ಸಕಲೇಶ ಮಾದರಸನ ವಚನಗಳನ್ನು ಸಂಗ್ರಹಿಸಿ, ಈ ಪುಸ್ತಕದಲ್ಲಿ ಪ್ರಸಿದ್ಧಿಸಿದ್ದೇವೆ. ಸಕಲೇಶ ಮಾದರಸನು ಬಸವೇಶ್ವರನ ಕಿಂತಲೂ ೪೦—೫೦ ವರ್ಷ ಹಿಂದಿನವನೆಂದು ಅವನ ಚರಿತ್ರೆಯಿಂದ ಕಂಡು ಬರುತ್ತದೆ. ಆದರೆ ಮುಂದೆ ಬಸವೇಶ್ವರನು ಕಲ್ಯಾಣದಲ್ಲಿ ನಡಿಸಿದ ಧರ್ಮ ಜಾಗ್ರತಿಯ ಕಾರ್ಯಗಳನ್ನು ಕೇಳಿ ಅವನು ಆ ಪಟ್ಟಣದಲ್ಲಿ ಬಂದು ನಿಂತುಕೊಂಡನು. ಅವನು ಬಸವೇಶ್ವರನು ಇರುವ ವರೆಗೂ ಅಲ್ಲಿಯೇ ಇದ್ದು ಕೊಂಡು ಶಿವಾನುಭವ ಮಂಟಪದಲ್ಲಿ ನಡೆಯುತ್ತಿದ್ದ ಶಿವಾನುಭವಗೋಷ್ಠಿ ಗಳಲ್ಲಿ ಮಗ್ನನಾಗಿ ತತ್ವವಿಚಾರಗಳಲ್ಲಿಯೇ ತೊಡಗಿರುತ್ತಿದ್ದನು. ಬಸವೇಶ್ವರನ ಸಮೀಪವರ್ತಿಗಳಾಗಿದ್ದ ಶಿವಶರಣರನ್ನು ವರ್ಣಿಸುವ ಕಾಲಕ್ಕೆ ಈತನ ಹೆಸರು ವೀರಶೈವ ಗ್ರಂಥಗಳಲ್ಲಿ ಯಾವಾಗಲೂ ಬರುತ್ತಿದೆ. ಬಹುತರ ಎಲ್ಲ ವಾದದ ವಚನಗಳಲ್ಲಿ ಸಕಲೇಶ ಮಾದರಸನ ವಚನಗಳೂ ಮೇಲಿಂದ ಮೇಲೆ ಬರುತ್ತವೆ. ಇವನ ವಚನಗಳು ಪುರಾತನ ಕಾಲದ ವಚನಗಳಂತೆ ಬಹು ಸುಂದರವಾದವುಗಳು. ಅವನು ತನ್ನ ಧಾರ್ಮಿಕ ವಿಚಾರಗಳನ್ನು ಬಹು ಮಾರ್ಮಿಕ ರೀತಿಯಿಂದ ವಿವರಿಸಿದ್ದಾನೆ.

ಸಕಲೇಶ ಮಾದರಸನ ವಚನಗಳು ನಮಗೆ ಒತ್ತಟ್ಟಿಗೆ ಸಮಗ್ರವಾಗಿ ದೊರಕಿರುವದಿಲ್ಲ. ಬೇರೆ ಬೇರೆ ವಚನ ಗ್ರಂಥಗಳಲ್ಲಿ ಸಿಕ್ಕವುಗಳನು ಒತ್ತಟ್ಟಿಗೆ ಸಂಗ್ರಹಿಸಿ, ಈ ಗ್ರಂಥವನ್ನು ಪ್ರಸಿದ್ಧಿಸಿದ್ದೇವೆ. ಇವುಗಳು ಓದುಗರಿಗೆ ಸ್ಫುಟವಾಗಿ ತಿಳಿಯಬೇಕೆಂಬ ಉದ್ದಿಶ್ಯವಾಗಿ ಶಕ್ಯವಿದ್ದಷ್ಟರ ಮಟ್ಟಿಗೆ ವಿಷಯಾನುಸಾರವಾಗಿ ಸ್ಥಲಗಳ ಪ್ರಕಾರ ಅವುಗಳನ್ನು ವಿಂಗಡಿಸಿ ಈ ಪುಸ್ತಕದಲ್ಲಿ ಪ್ರಸಿದ್ಧಿಸಿದ್ದೇವೆ.

ಸಕಲೇಶ ಮಾದರಸನ ಚರಿತ್ರೆಯು ಪದ್ಮಣಾಂಕ ಮಹಾಕವಿಯು ವಿರಚಿಸಿದ ಪದ್ಮರಾಜ ಪುರಾಣದ ೨ನೇ ಸಂಧಿಯಲ್ಲಿಯೂ ಬಸವ ಪುರಾಣದ ೧೯ನೇ ೨೦ನೇ ಅಧ್ಯಾಯಗಳಲ್ಲಿಯೂ ಬಂದಿರುತ್ತದೆ. ಪದ್ಮರಾಜ ಪುರಾಣದಿಂದ ಸಕಲೇಶ ಮಾದರಸನು ಕೆರೆಯ ಪದ್ಮರಸನ ಅಜ್ಜನೆಂತಲೂ ಕಲ್ಲುಕುರಿಕೆ ಎಂಬಲ್ಲಿ ಅವನು ರಾಜ್ಯವಾಳುವ ದೊರೆಯಾಗಿದ್ದನೆಂತಲೂ ತಿಳಿದು ಬರುತ್ತಿದೆ. ಈ ಪದ್ಮರಾಜ ಪುರಾಣವನ್ನು ವಿರಚಿಸಿದ ಪದ್ಮಣಾಂಕ

ಮಹಾಕವಿಯೂ ಸಹ ಸಕಳೇಶ ಮಾದರಸನ ವಂಶದವನಿದ್ದು, ಅವನು ತನ್ನ ವಂಶಾವಳಿಯನ್ನು ಈ ಕಾವ್ಯದಲ್ಲಿ ಕೊಟ್ಟಿದ್ದಾನೆ. ಇದರಿಂದ ಪದ್ಮಣಾಂಕನಿಗೆ ಮಾದರಸನು F ತಲೆ ಹಿಂದಿನವನಾಗಿದ್ದನೆಂದು ತಿಳಿದುಬರುತ್ತದೆ. ಆದ್ದರಿಂದ ಈ ಕವಿಯು ಸಕಳೇಶ ಮಾದರಸನ ಬಗ್ಗೆ ಹೇಳಿದ ವೃತ್ತಾಂತಗಳು ಹೆಚ್ಚು ವಿಶ್ವಸನೀಯವೆಂದು ತಿಳಿಯಬಹುದಾಗಿದೆ. ಪದ್ಮರಾಜ ಪುರಾಣದಿಂದ ಕೆಳಗೆ ಕಾಣಿಸಿದ ಸಂಗತಿಗಳು ತಿಳಿದು ಬರುತ್ತವೆ.

ಕರ್ನಾಟಕದಲ್ಲಿ ಕಲ್ಲುಕುರಿಕೆ ಎಂಬ ಪಟ್ಟಣವಿದ್ದು ಅಲ್ಲಿ ಮಲ್ಲಿಕಾರ್ಜುನನೆಂಬ ವೀರಶೈವ ರಾಜನು ಆಳುತ್ತಿದ್ದನು. ಅವನು ಕೆಲವು ದಿನ ರಾಜ್ಯಭಾರ ಮಾಡಿದ ಬಳಿಕ ಅವನಲ್ಲಿ ಈ ರಾಜ್ಯವು 'ನಾಯಿಗೆ ಸರಿ' ಎಂಬ ಭಾವವು ಉಂಟಾಗಿ ವೈರಾಗ್ಯಶೀಲನಾಗಿ ತನ್ನ ಮಗನಾದ ಸಕಳೇಶ ಮಾದರಸನಿಗೆ ಪಟ್ಟಗಟ್ಟಿ ತಾನು ಶ್ರೀಶೈಲ ಪರ್ವತಕ್ಕೆ ಹೋದನು.

ಸಕಳೇಶ ಮಾದರಸನಾದರೂ ಅತ್ಯಂತ ಭಕ್ತಿ ಭಾವವುಳ್ಳವನಾಗಿ ರಾಜ್ಯವನ್ನು ಪರಿಪಾಲಿಸುವವನಾದನು. ಅವನು ಕೆಲವು ವರುಷ ಅರಸುತನ ಮಾಡುತ್ತಿರಲು ಅವನು ತನ್ನ ತಂದೆಯು ವಿರತಿಭಾವವನ್ನು ಹೊಂದಿ ರಾಜ್ಯಪದವಿಯನ್ನು ಬಿಟ್ಟುಕೊಟ್ಟು ಹೋದನೆಂಬುದನ್ನು ಲಕ್ಷಿಸಿ ಅವನಲ್ಲಿಯೂ ವೈರಾಗ್ಯವು ಉಂಟಾಗಿ ಅವನಂತೆಯೇ ಪಾರಮಾರ್ಥಿಕ ಸುಖವನ್ನು ಹೊಂದಬೇಕೆಂದು ಅಪೇಕ್ಷಿಸಿ ತನ್ನ ಹೆಂಡತಿ ಮತ್ತು ತನ್ನ ಮಗ ಇವರೊಡನೆ ಶ್ರೀಶೈಲ ಪರ್ವತಕ್ಕೆ ತೆರಳುವವನಾದನು.

ಆಗ ಅವನಿಗೆ ಮಾರ್ಗದಲ್ಲಿ 'ಅಂಬೆ' ಎಂಬ ಪುರವು ಹತ್ತಲು ಅಲ್ಲಿಯ ಜನರು ಸಕಳೇಶನ ನಿಷ್ಠೆಗೆ ಪ್ರೀತರಾಗಿ, ಅವರು ಅವನನ್ನು ಮುಂದೆ ಹೋಗಗೊಡದೆ, ಅದೇ ಗ್ರಾಮದಲ್ಲಿ ನಿಲ್ಲಿಸಿಕೊಂಡರು. ಅಲ್ಲಿಯವರೆಲ್ಲರೂ ಸಕಳೇಶನು ತಮ್ಮ ಗುರುವೆಂತಲೇ ಭಾವಿಸಿ ಅವನೊಡನೆ ಪೂಜ್ಯಭಾವದಿಂದ ಇರಹತ್ತಿದರು. ಅವನಾದರೂ ಅಲ್ಲಿಯವರ ಭಕ್ತಿಗೆ ಮೆಚ್ಚಿ ಅಲ್ಲಿಯೇ ಉಳಿದನು. ಅವನು ಈ ಗ್ರಾಮದಲ್ಲಿರುವಾಗ್ಗೆ ಜನರ ದೀಕ್ಷಾದಿ ಕಾರ್ಯಗಳನ್ನು ನೆರವೇರಿಸುತ್ತ ಪೂಜಾರ್ಚನಾದಿಗಳನ್ನು ಸಂಭ್ರಮದಿಂದ ಎಸಗುತ್ತ ಅಲ್ಲಿ ವಾಸಮಾಡಹತ್ತಿದನು. ಹೀಗೆ ಮಾಡುವಲ್ಲಿ ಅವನು ತಾನು ಮೊದಲು ರಾಜವೈಭವಗಳೊಡನೆ ಹೇಗೆ ಕಾಲಕಳೆಯುತ್ತಿ



ದ್ದನೋ, ಹಾಗೆಯೇ ಶಿವಲಿಂಗಾರ್ಚನಾದಿಗಳನ್ನು ಮಾಡುವಲ್ಲಿ ಅತ್ಯಂತ ವೈಭವದಿಂದ ಅವುಗಳನ್ನು ಮಾಡಲು ಪ್ರೀತಿಯುಳ್ಳವನಾದನು. ಅಂದರೆ ಪೂಜಾ ಕಾಲದಲ್ಲಿ ಅನೇಕ ವಿವಿಧೋಪಚಾರಗಳು, ಅನೇಕ ತರದ ಪುಷ್ಪಗಳು, ಧೂಪದೀಪಾದಿಗಳು, ತರತರದ ಸಂಗೀತಗಳು, ವಾದ್ಯಗಳು, ಇವುಗಳೆಲ್ಲ ಅಟ್ಟಹಾಸದಿಂದ ಮೆರೆಯುವಂತೆ ಮಾಡುತ್ತಿದ್ದನು. ಹೀಗೆ ಅವನ ಕ್ರಿಯೆಗಳು ಸಂಭ್ರಮದಿಂದ ನಡೆಯಹತ್ತಿದ್ದರಿಂದ ಅವನ ಶಿಷ್ಯ ಸಮುದಾಯವೂ ಹೆಚ್ಚುತ್ತಲೇ ಬಂದಿತು. ಬಹು ಜನರು ಅವನನ್ನು ತಮ್ಮ ಗೃಹಕ್ಕೆ ಕರೆದುಕೊಂಡು ಹೋಗಿ ಅವನ ಪಾದತೀರ್ಥವನ್ನು ಸ್ವೀಕರಿಸಹತ್ತಿದರು. ಅಂಥ ಸಮಯದಲ್ಲಿ ಸಕಳೇಶ್ವರನು ತನ್ನ ನಿತ್ಯ ಶಿವಪೂಜೆಯ ಸಾಧನಕ್ಕೆಂದು ೧೨ ವರಹಗಳನ್ನು ಕಾಣಿಕೆಯಾಗಿ ತೆಗೆದುಕೊಂಡು ಅವುಗಳನ್ನೆಲ್ಲ ಅವನು ತನ್ನ ಪೂಜಾರ್ಚನಾದಿಗಳಲ್ಲಿ ವಿನಿಯೋಗಿಸುತ್ತಿದ್ದನು. ಒಂದು ವೇಳೆ ಯಾರಾದರೂ ಕಡಿಮೆ ಹಣ ಕೊಡಲು ಬಂದರೆ ಅವರ ಮನೆಗೆ ಅವನು ಹೋಗುತ್ತಿರಲಿಲ್ಲ !

ಹೀಗಿರಲು ಒಂದು ದಿನ ಒಬ್ಬ ಬಡ ಭಕ್ತನು ಸಕಳೇಶ ಮಾದರಸನನ್ನು ತನ್ನ ಮನೆಗೆ ಕರೆತಂದಿರಲು ಮಾದರಸನು ಅವನಿಗೆ ೧೨ ವರಹ ಕೊಡಬೇಕೆಂದು ಕೇಳಿದನು. ಆದರೆ ಆ ಭಕ್ತನಲ್ಲಿ ಅಷ್ಟು ಹಣವಿರಲಿಲ್ಲ. ಆಗ ಆ ಭಕ್ತನು ತನ್ನ ಮನಸ್ಸಿನಲ್ಲಿ 'ನನಗೆ ಧನವಿದ್ದರೆ ಕೃತಾರ್ಥನಾಗುತ್ತಿದ್ದೆನಲ್ಲಾ ! ಗುರು ಹೋಗದ ಮನೆ ಅರಣ್ಯ. ಈಗ ಏನು ಮಾಡಲಿ?' ಎಂದು ಚಿಂತಿಸುತ್ತ ಕುಳಿತಿರಲು, ಅವನ ಮಗಳಾದ ಮಾದರಸಿಯು ಇದನ್ನು ತಿಳಿದು, ಅವಳು ತನ್ನ ತಂದೆಗೆ ಹೇಳಿದ್ದು 'ನನ್ನನ್ನು ನೀನು ಧನವುಳ್ಳವರಲ್ಲಿ ಒತ್ತೆ ಇಡು. ಹೀಗೆ ಬಂದ ಹಣದಿಂದ ಗುರು ಸೇವೆಯನ್ನು ಮಾಡು' ಎಂದು ಸೂಚಿಸಿದಳು. ಅವಳ ತಂದೆಯು ಹಾಗೆಯೇ ಆಗಲೆಂದು ಅವಳನ್ನು ಒಬ್ಬ ಸಾಹುಕಾರನಲ್ಲಿ ಒತ್ತೆ ಇಟ್ಟು, ಹಣವನ್ನು ತಂದು ಗುರುವಿನ ಸೇವೆಯನ್ನು ಮಾಡಹತ್ತಿದನು.

ಈ ಸಂಗತಿಯು ಸಕಳೇಶ ಮಾದರಸನಿಗೆ ತಿಳಿದಿದ್ದರೂ ಅವನು ಅಂಥ ಹಣವನ್ನು ಸ್ವೀಕರಿಸಿ ತನ್ನ ಪೂಜಾದಿ ಕಾರ್ಯಗಳನ್ನು ನೆರವೇರಿಸಹತ್ತಿದನು. ಮುಂದೆ ಪೂಜಾ ಕಾಲದಲ್ಲಿ ತನ್ನ ಲಿಂಗಕ್ಕೆ ಧೂಪಾರತಿಯನ್ನು ಎತ್ತುತ್ತಿರುವಾಗ್ಗೆ, ಅದರಿಂದ ಪ್ರಕಾಶಹೊಂದಿದ ಆ ಲಿಂಗದಲ್ಲಿ ಒತ್ತೆ

ಯಾಗಿ ಹೋಗಿದ್ದ ಆ ಭಕ್ತನ ಮಗಳ ರೂಪು ಸುಳಿದಾಡಹತ್ತಿತು! ಈ ಅದ್ಭುತವನ್ನು ಕಂಡಕೂಡಲೆ ಅವನು ಅತ್ಯಂತ ಭೀತಿಗೊಂಡನು. ಮತ್ತು ಕೂಡಲೇ ಅವನಿಗೆ ಅತ್ಯಂತ ಪಶ್ಚಾತ್ತಾಪವಾಯಿತು. ಆಗ ಅವನು ಮನಸ್ಸು ಕುಂದಿದವನಾಗಿ, ತಲೆವಾಗಿ, 'ಅಕಟಕಟಾ, ನಾನು ಮಾಡುವ ಈ ಪೂಜೆ ಶಿವಭಕ್ತರ ಮಕ್ಕಳನ್ನು ಮಾರಿಸುವ ತೆರನಾಯಿತೇ? ಪರರನ್ನು ಬಾಧಿಸುವಂತಾಯಿತೇ' ಎಂದೆಂದು 'ರಾಜಭೋಗವನ್ನು ನಾನು ಬಿಟ್ಟೆನು, ಈಗ ನನಗೆ ಈ ಶಿವಪೂಜಾಭೋಗವು ಒದಗಿತು. ಇದು ಬೇಡ' ಎಂದೆಂದು ಶ್ರೀಶೈಲದಲ್ಲಿ ಶಿವಯೋಗಿ ಮಲ್ಲರಸನೆಂಬ ಶಿವಾನುಭವಿಯು ಇದ್ದಾನೆ, ಅವನಿಂದ ಉಪದೇಶವನ್ನು ಹೊಂದುವೆನೆಂದು ತಾನಿದ್ದ 'ಅಂಬೆ' ಗ್ರಾಮವನ್ನು ಬಿಟ್ಟುಕೊಟ್ಟು ಶ್ರೀಶೈಲ ಪರ್ವತಕ್ಕೆ ತೆರಳಿದನು.

ಅಲ್ಲಿಗೆ ಅವನು ಹೋಗುವ ಮುಂದೆ ಅವನು ತನ್ನ ಮಗನಾದ ಮಾಯಿದೇವನನ್ನು ಕರೆದು ನೀನು ಇಲ್ಲಿಯೇ ಇದ್ದು ರಾಜ್ಯ ಭಾರವನ್ನು ಮಾಡು, ನಿನ್ನಿಂದ ಒಬ್ಬ ಕಾರಣಿಕನಾದ ಪುಣ್ಯ ಪುರುಷನು ಹುಟ್ಟುವನು[೧] ಅವನು ವೀರಶೈವ ಮತವನ್ನು ಉದ್ಧರಿಸುವನು ಎಂದು ಹೇಳಿ ತನ್ನ ರಾಜ್ಯ ಭಾರವನ್ನು ಅವನಿಗೆ ಒಪ್ಪಿಸಿ ತಾನು ಪರ್ವತಕ್ಕೆ ಬಂದನು.

ಅವನು ಅಲ್ಲಿಗೆ ಹೋದ ಬಳಿಕ ಶಿವಯೋಗಿ ಮಲ್ಲರಸನನ್ನು ಕಂಡು ಉಗ್ರ ತಪಸ್ಸನ್ನು ಆಚರಿಸಬೇಕೆಂಬ ತನ್ನ ಮನದ ಬಯಕೆಯನ್ನು ಅವನಿಗೆ ಹೇಳಲು ಅದಕ್ಕೆ ಆ ಶಿವಯೋಗಿಯು— 'ಏನು ಮಾದರಸಯ್ಯ, ಲಿಂಗಾರ್ಚನೆಯನ್ನು ಬಿಟ್ಟುಕೊಟ್ಟು ಈ ಕಟ್ಟಡವಿಗೆ ಏಕೆ ಬಂದೆ? ಇಲ್ಲಿಯ ಕಷ್ಟಗಳಿಗೆ ನೀನು ಒಳಗಾಗದೆ ಪಟ್ಟಣದಲ್ಲಿದ್ದುಕೊಂಡು ಮೊದಲಿನಂತೆ ಶಿವಪೂಜೆಯನ್ನು ಮಾಡು, ನಿನ್ನ ನಿಜಭಕ್ತಿಯನ್ನು ಜಗತ್ತಿನಲ್ಲಿ ಮೆರೆಯಿಸು' ಎಂದು ಉಪಹಾಸ ಮಾಡಿ ನುಡಿಯಲು, ಅದಕ್ಕೆ ಸಕಳೇಶ ಮಾದರಸನು– 'ಇಲ್ಲಿಯ ಮುನಿಗಳಂತೆ ನಾನು ತಪಸ್ಸು ಮಾಡಲು ಬಂದಿದ್ದೇನೆ, ನನಗೆ ಲಿಂಗಪೂಜೆಯು ಸಾಕಾಯಿತು. ನಾನು ಇಲ್ಲಿಯೇ ತಪಸ್ಸನ್ನಾಚರಿಸುವೆನು' ಎಂದು ನಿರ್ಧಾರವಾಗಿ ಹೇಳಲು ಹಾಗೆಯೇ ಆಗಲೆಂದು ಶಿವಯೋಗಿ ಮಲ್ಲರಸನು ಅವನಿಗೆ ತಿಳಿಸಲು ಮಾದರಸನು ಅರಣ್ಯದಲ್ಲಿ ಉಗ್ರ ತಪಸ್ಸನ್ನು ಆಚರಿಸಲು ಪ್ರಾರಂಭಿಸಿದನು.

---

೧ ಕೆರೆಯ ಪದ್ಮರಸ



ಕೆಲವು ದಿವಸಗಳಾದ ಮೇಲೆ ಮಲ್ಲರಸನು ಅವನ ಮೂಢತನವು ಅವನಿಗೆ ತಿಳಿಯಬೇಕೆಂದು ಒಂದು ಕಪಟೋಪಾಯವನ್ನು ಯೋಜಿಸಿದನು. ಅವನು ಒಬ್ಬ ಕುರುಬನ ವೇಷವನ್ನು ಧಾರಣ ಮಾಡಿ ಹೆಗಲಲ್ಲಿ ಬಗಲಲ್ಲಿ ಕುರಿಗಳು, ಕಟಿವಾಯಲ್ಲಿ ಸುರಿವ ಜೊಲ್ಲು, ಡೊಂಕು ತೋಳು, ಕೈಯ್ಯಲ್ಲಿ ಕವಣೆಗಲ್ಲು, 'ಹೋ ಹೋ' ಎನ್ನುತ್ತ ಬೀರ ಮೈಲಾರದೇವನ ಹಾಡುಗಳನ್ನು ಹಾಡುತ್ತ, ಕೂಗುತ್ತ, ಸಕಳೇಶ ಮಾದರಸನಿದ್ದ ಮರದಡಿಗೆ ಬಂದು ನಿಂತನು. ಆಗ ಅಲ್ಲಿ ಸಕಳೇಶನು ಕಣ್ಣು ಮುಚ್ಚಿಕೊಂಡು ಆಧ್ಯಾತ್ಮ ಸುಖದ ಸುಷುಪ್ತಿಯಲ್ಲಿ ಮರೆತು ಹೋಗಿದ್ದನು. ಆದರೆ ಆ ಕುರುಬನು ಸಕಳೇಶ ಮಾದರಸನ ಆ ನಿಷ್ಪತ್ತಿಯನ್ನು ನಿಂದಿಸುತ್ತ, ಅವನಿಗೆ ಇದೆಂತಹ ತಪವು! ಇದನ್ನು ಬಿಡು, ನನ್ನ ಆಡುಗಳ ಮೇಲೆ ಹಾಡು, ಎಂದೆನ್ನುತ್ತ ಗಿಡವನ್ನೇರಿ ಅದರ ಎಲೆಗಳನ್ನು ಅವನ ಮೇಲೆ ಸುರಿಸುತ್ತ ಅವನ ಶಾಂತಿಯನ್ನು ಭಂಗ ಮಾಡಿದನು. ಆಗ ಸಕಳೇಶ ಮಾದರಸನು ಕಣ್ಣು ತೆರೆದು ಅವನನ್ನು ಕಂಡು ಕೋಪದಿಂದ ಬೆಂದು, 'ಎಲೋ ಗೊಲ್ಲ, ಪುಣ್ಯಪಾಪವನರಿಯದ ಜೀವಘಾತಕನೇ, ಬಲವಾದ ತಪಸ್ಸಿನಲ್ಲಿದ್ದ ನನ್ನನ್ನು ನೀನು ನೋಡುವದಿಲ್ಲವೇ? ನಾನು ಶಾಪಾನುಗ್ರಹ ಸಮರ್ಥನು. ನಿನ್ನನ್ನು ಕೊಲ್ಲಲು ನನಗೆ ಶಕ್ತಿ ಇಲ್ಲವೇ? ನಿನಗೆ ಶಾಪ ಕೊಡುತ್ತೇನೆ' ಎಂದು ಸಿಟ್ಟಿನಿಂದ ಅಬ್ಬರಿಸಿದನು. ಆಗ ಮಲ್ಲರಸನು ತನ್ನ ನಿಜರೂಪುದೋರಿ, 'ಸಕಳೇಶನೇ ಭಾಪುರೇ, ನಿನ್ನ ಶಮೆ, ದಮೆ, ಶಾಂತಿ ಇದೆಯೇ? ಕಾಡ ಸೊಪ್ಪು ತಿಂದು ತನುವನ್ನು ಹೀಗೆ ಬಳಲಿಸಲೇಕೆ? ಮುನಿಕುಲದೊಳಗೆ ನೀನು ಅಗ್ರಜನಾದರೇನು, ರಾಜ ಋಷಿಯಾದರೇನು, ನಿನ್ನ ಮನದ ಹೊಲೆ ಬಿಡದು. ಇಂಥ ತಪದಿಂದೇನು ಪ್ರಯೋಜನ? ಬಾಹ್ಯಲಿಂಗ ಪೂಜೆಯಿಂದಲೂ ನಿನ್ನ ದ್ರವ್ಯಲೋಭವು ಹೋಗಲಿಲ್ಲ. ತಪದಿಂದಲೂ ನಿನ್ನ ಸಿಟ್ಟು ಹೋಗಲಿಲ್ಲ. ಈ ಮಾರ್ಗಗಳನ್ನು ಬಿಟ್ಟು ಕೊಟ್ಟು, ಶಿವಶರಣರ ಲಿಂಗತ್ರಯದ ರೀತಿಯನ್ನು ತಿಳಿದುಕೋ. ಶಿವಾನುಭವಕ್ಕೆ ತಲೆವಾಗು' ಎಂದು ನುಡಿಯಲು ಸಕಳೇಶ ಮಾದರಸನು 'ನಾನು ಈ ವರೆಗೆ ದ್ವೈತಭಾವದಲ್ಲಿ ಕಷ್ಟಪಟ್ಟೆನು. ನನ್ನನ್ನು ಉದ್ಧರಿಸು' ಎಂದು ಹೇಳಿಕೊಳ್ಳಲು, ಅದಕ್ಕೆ ಶಿವಯೋಗಿ ಮಲ್ಲರಸನು 'ಬಸವಾದಿ ಪ್ರಮಥರು ಈಗ ಕಲ್ಯಾಣದಲ್ಲಿ ಇದ್ದಾರೆ. ಅವರು ಲಿಂಗಾಂಗದ ಮತ್ತು ಭಕ್ತಿಯ ರೀತಿಯನ್ನು ಉಪದೇಶಿಸುತ್ತಾರೆ. ಆ ಮಹಾತ್ಮರೆಡೆಗೆ ಹೋಗು. ಅವರ ಶಿವಾ

ನುಭವ ಗೋಷ್ಠಿಯಲ್ಲಿರು. ಅವರಿಂದ ಉಪದೇಶವನ್ನು ಪಡೆದುಕೋ. ಶಿವಾನುಭಾವಿಗಳ ಸಂಗ ಅವರಿಂದ ತ್ರಿಲಿಂಗಪೂಜೆಯನ್ನು ಅರಿತುಕೋ. ಶಿವಾನುಭಾವಿಗಳ ಸಂಗದಿಂದಲೇ ತನು ಮನ ಕರಣಗಳು ತರಹರವಾಗುತ್ತವೆ. ನೀನು ಅವರಲ್ಲಿಗೆ ಹೋಗು. ಅಲ್ಲಿಗೆ ಹೋಗಿ ಶಿವಾನುಭವದಲ್ಲಿದ್ದು ಆ ಮೇಲೆ ಇಲ್ಲಿಗೆ ಬಾ. ಇನ್ನು ೫೦ ವರ್ಷಕ್ಕೆ ನೀನಿಲ್ಲಿಗೆ ಬರುವಿ' ಎಂದು ಹೇಳಲು ಸಕಲೇಶಮಾದರಸನು ಅದಕ್ಕೆ ಒಪ್ಪಿ ಕಲ್ಯಾಣಕ್ಕೆ ಹೊರಟನು.

ಕಲ್ಯಾಣಕ್ಕೆ ಅವನು ಬರುವಷ್ಟರಲ್ಲಿ ಬಸವ, ಚನ್ನಬಸವ, ಸಿದ್ಧರಾಮ, ಪ್ರಭುದೇವ, ಮಡಿವಾಳಮಾಚಿದೇವ ಮೊದಲಾದ ಅಸಂಖ್ಯ ಶಿವಶರಣರು ನಾಡಿನಲ್ಲಿ ಉದ್ಭವಿಸಿ ಬಸವೇಶ್ವರನ ಸನ್ನಿಧಿಯಲ್ಲಿ ಶಿವಾನುಭವ ಮಂಟಪದಲ್ಲಿ ಸೇರಿ, ಅಲ್ಲಿ ಷಡ್ಲಿಂಗ, ತ್ರಿಲಿಂಗ, ಅಷ್ಟಾವರಣಗಳ ರೀತಿಗಳನ್ನು ಬೋಧಿಸುವವರಾಗಿದ್ದರು. ಆಗ ಸಕಳೇಶಮಾದರಸನು ಅವರೊಡನೆ ಶಿವಾನುಭವಗೋಷ್ಠಿಯಲ್ಲಿದ್ದು ಅವರಲ್ಲಿ ತಾನೂ ಒಬ್ಬ ಶ್ರೇಷ್ಠ ಶಿವಾನುಭವಿ ಎಂದೆನಿಸಿಕೊಂಡನು. ಮತ್ತು ಅವರಂತೆಯೇ ತನ್ನ ಶಿವಾನುಭವವನ್ನು ವಚನಗಳ ಮೂಲಕ ಬೋಧಿಸಹತ್ತಿದನು.

ಹೀಗೆ ಸಕಳೇಶಮಾದರಸನು ಕೇವಲ ಕ್ರಿಯೆಗಳನ್ನು ಅಥವಾ ಕೇವಲ ಸನ್ಯಾಸವನ್ನು ಕೈಕೊಳ್ಳುವದು ಮುಕ್ತಿಗೆ ಸಾಧನವಲ್ಲ, ತ್ರಿಲಿಂಗಗಳನ್ನು ಷಟ್‌ಸ್ಥಲಾಚರಣೆಗನುಸಾರವಾಗಿ ಪೂಜಿಸುತ್ತ, ಅವುಗಳನ್ನೊಳಕೊಳ್ಳುವದರಲ್ಲಿಯೇ ಮುಕ್ತಿಯು ಇದೆ ಎಂದು ತಿಳಿದವನಾಗಿ ಹಾಗೆ ಆಚರಿಸುತ್ತ ಕಲ್ಯಾಣದಲ್ಲಿ ಇರಹತ್ತಿದನು. ಅವನು ಮೊದಲಿನಿಂದಲೂ ಗುರುಪೀಠವನ್ನು ಅಲಂಕರಿಸಿದವನಾದ್ದರಿಂದ ಕಲ್ಯಾಣ ಪಟ್ಟಣದಲ್ಲಿಯೇ ಅವನು ಒಂದು ಮಠವನ್ನು ನಿರ್ಮಿಸಿಕೊಂಡು ಭಕ್ತ ಜನರಿಗೆ ಬೋಧಿಸುತ್ತ ಅವರಿಗೆ ದೀಕ್ಷೆಯನ್ನು ಕೊಡುತ್ತ ವಾಸಿಸುವನಾದನು. ಈ ರೀತಿ ಅವನು ಕೆಲವು ಕಾಲ ಇರುತ್ತಿರಲು, ಹರಳಯ್ಯ ಮಧುವಯ್ಯಗಳ ವಿಷಯವಾಗಿ ರಾಜಧಾನಿಯಲ್ಲಿ ಅನಾಹುತಗಳು ಸಂಭವಿಸಿದವು. ಆಗ ಬಸವೇಶ್ವರನು ಕಪ್ಪಡಿಸಂಗಮೇಶ್ವರನಲ್ಲಿಗೆ ತೆರಳಿದನು. ಸಕಲೇಶಮಾದರಸನೂ ಕೂಡ ಅವನೊಡನೆ ಹೊರಟನು. ಅಲ್ಲಿ ಬಸವೇಶ್ವರನು ಲಿಂಗೈಕ್ಯನಾಗುವ ವರೆಗೆ ಇದ್ದು ಮುಂದೆ ಅವನು ಶ್ರೀಶೈಲ ಪರ್ವತಕ್ಕೆ ತಿರುಗಿ ಹೊರಡುಲುದ್ಯುಕ್ತನಾದನು.



ಅವನು ಹೀಗೆ ಮಾರ್ಗ ಸಂಚಾರ ಮಾಡುತ್ತ ಬರುತ್ತಿರಲು ದಾರಿಯಲ್ಲಿ ಗೋಪೆ ಎಂಬ ಗ್ರಾಮಕ್ಕೆ ಬಂದನು. ಅಲ್ಲಿ ಶಿವದೇವನೆಂಬ ಶರಣನು ಇದ್ದು ಅವನು ಒಂದು ನಿಷ್ಠುರವಾದ ವ್ರತವನ್ನು ಆಚರಿಸುತ್ತಿರಲು ಅವನಿಗೆ ಶಿವಾನುಭವದ ಬೋಧೆಯನ್ನು ಮಾಡಿ, ಅಂಥ ಕ್ಲಿಷ್ಟ ವ್ರತಗಳು ಪ್ರಯೋಜನವಲ್ಲವೆಂಬುದನ್ನು ತಿಳಿಸಿ ಹೇಳಿ ಮುಂದೆ ಮತ್ತೊಂದು ನಗರಿಗೆ ಬರಲು, ಅಲ್ಲಿ ಕೇವಲ ಪೂಜಾಸಕ್ತನಾದ ಅತ್ಯಂತ ಕರ್ಮಠನಾದ ಮಹಾಲಿಂಗ ರಾಮನೆಂಬ ಭಕ್ತನನ್ನು ಕಂಡು ಅವನಿಗೆ ಇಂಥ ಕರ್ಮಗಳಿಂದ ಮುಕ್ತಿಯು ಲಭಿಸದು ಎಂದು ಹೇಳಿ ಅವನಿಗೆ ಪ್ರಸುಧರ ಲಿಂಗಾಂಗಸಾಮರಸ್ಯದ ರೀತಿಯನ್ನು ಅರುಹಿ ಅಲ್ಲಿಂದ ತನ್ನ ಮೊದಲಿನ ಪರ್ವತಾಶ್ರಮಕ್ಕೆ ಬಂದನು.

ಅಲ್ಲಿ ಅವನು ಮಲ್ಲರಸನನ್ನು ಕಂಡು ಅವನಿಗೆ ತಾನು ಶಿವಾನುಭವ ಮಂಟಪದಲ್ಲಿ ಹೊಂದಿದ ಶಿವಾನುಭವದ ಮಾರ್ಗವನ್ನು ವಿವರಿಸಿ, ನನ್ನ ಜನ್ಮವು ಬಸವಾದಿ ಪ್ರಮಥರಿಂದ ಸಾರ್ಥಕವಾಯಿತೆಂದು ಹೇಳಿದನು. ಅಷ್ಟರಲ್ಲಿ ಅನೇಕ ಶಿವಾನುಭವಿಗಳು ಈ ಪ್ರದೇಶದಲ್ಲಿ ನೆರೆದಿದ್ದರು. ಅವನು ಅವರೊಡನೆ ಬಹು ಕಾಲ ಶಿವಾನುಭವಗೋಷ್ಠಿಯಲ್ಲಿದ್ದು ಅಲ್ಲಿಯೇ ಲಿಂಗೈಕ್ಯನಾದನು.

ಇವರ ಮೇಲಿಂದ ೧೨ನೇ ಶತಮಾನದಲ್ಲಿ ವೀರಶೈವ ಧರ್ಮ ಜಾಗ್ರತಿಯ ಕಾರ್ಯವು ಬಸವೇಶ್ವರನಕಿಂತಲೂ ಪೂರ್ವದಲ್ಲಿಯೇ ಪ್ರಾರಂಭವಾಗಿತ್ತೆಂದು ತೋರುತ್ತದೆ. ಆಗ ಅನೇಕ ಶಿವಶರಣರು ಉತ್ಪನ್ನರಾಗಿ ಧರ್ಮಪ್ರಸಾರದ ಕಾರ್ಯಗಳನ್ನು ಮಾಡಿದರು. ಮುಂದೆ ಬಸವೇಶ್ವರನು ಕಲ್ಯಾಣಕ್ಕೆ ಬಂದ ಬಳಿಕ ಈ ಧರ್ಮಪ್ರಸಾರದ ಕಾರ್ಯಗಳು ಮತ್ತಿಷ್ಟು ಬಲವಾಗಿ ಸಾಗಿದವು. ಆಗ ರಾಜರಿಂದ ಹಿಡಿದು ಅಸ್ಪೃಶ್ಯರ ವರೆಗೆ ಎಲ್ಲರಲ್ಲಿ ಧಾರ್ಮಿಕ ಚಳವಳಿಯು ಬಹು ಬಲವಾಗಿ ನಡೆಯಿತು. ಮತ್ತು ಅಸಂಖ್ಯ ವಚನಗಳು ರಚಿಸಲ್ಪಟ್ಟು ಅವುಗಳ ಮೂಲಕ ದೇಶದಲ್ಲೆಲ್ಲ ಧರ್ಮ ಬೋಧೆಯ ಕಾರ್ಯಗಳು ಸಾಗಿದವು. ಈ ಮೇರೆಗೆ ೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಮತ್ತು ಅದರ ಸುತ್ತಲಿನ ಪ್ರದೇಶಗಳಲ್ಲಿ ಮುಖ್ಯವಾಗಿ ಆಂಧ್ರ ದೇಶದಲ್ಲಿ ಒಂದು ಮಹತ್ತರವಾದ ಧರ್ಮಕ್ರಾಂತಿಯು ಉದ್ಭವಿಸಿದ್ದು ತೋರಿಬರುತ್ತದೆ.

ಸಕಲೇಶಮಾದರಸನು ಕಲ್ಯಾಣವನ್ನು ಬಿಟ್ಟು ಶ್ರೀಶೈಲ ಪ್ರಾಂತದಲ್ಲಿ ಬಂದ ಬಳಿಕ ಅವನು ಅದರ ಸುತ್ತಲಿನ ಪ್ರದೇಶದಲ್ಲಿ ಶಿವಾನುಭವ ಶಾಸ್ತ್ರದ ಪ್ರಚಾರವನ್ನು ಹೆಚ್ಚಾಗಿ ಮಾಡಿದಂತೆ ತೋರುತ್ತದೆ. ಆದುದ ರಿಂದಲೇ ಆಂಧ್ರವೀರಶೈವರು ಅವನಿಗೆ ತಮ್ಮ ವಾಙ್ಮಯದಲ್ಲಿ ಉಚ್ಚ ಸ್ಥಾನವನ್ನು ಕೊಟ್ಟಿದ್ದಾರೆ.

**ಫ. ಗು. ಹಳಕಟ್ಟಿ.**
ಸಂಪಾದಕ

---

# ಸಕಲೇಶ ಮಾದರಸನ

## ವಚನಗಳು.

## ಭಕ್ತಸ್ಥಲ.

### ನೀತಿಯುಳ್ಳವನಾಗಿರುವುದು.

೧. ಆಟವುಟವೇ ಆಧಾರ, ಕಪಟವೇ ಸದಾಚಾರ, ಕುಟಿಲವೇ ಘನ ವಾಯಿತ್ತು ಕೆಲಬರಿಗೆ. ಹುಸಿಯ ಮಸಕವೇ ವರ್ತನೆಯಾಯಿತ್ತು ಕೆಲ ಬರಿಗೆ. ಯಂತ್ರ ತಂತ್ರವೇ ವ್ಯವಹಾರವಾಯಿತ್ತು ಕೆಲಬರಿಗೆ. ಸಟೆಯ ಸಾಗರದೊಳಗೆ ತೇಂಕಾಡುತಿರ್ಪರು ಕೆಲಬರು, ಸಕಳೇಶ್ವರ ದೇವರ ನೆರೆ ನಂಬಲರಿಯದವರೆಲ್ಲರು.

ಆಟಮಟ= ಠಕ್ಕುತನ; ಮಸಕ= ಮನಸ್ಸಿನ ಹೊಯ್ದಾಟ; ತೇಂಕಾಡು= ಹೊಯ್ದಾಡು.

೨. ಆಸೆಯಿಂದ ಬಿಟ್ಟು ಕಿರಿಯರಿಲ್ಲ. ನಿರಾಸೆಯಿಂದ ಬಿಟ್ಟು ಹಿರಿ ಯರಿಲ್ಲ. ದಯದಿಂದ ಬಿಟ್ಟು ಧರ್ಮವಿಲ್ಲ. ವಿಚಾರದಿಂದ ಬಿಟ್ಟು ಸಹಾ ಯಿಗಳಿಲ್ಲ. ಸಚರಾಚರಕ್ಕೆ ಸಕಳೇಶ್ವರದೇವರಿಂದ ಬಿಟ್ಟು ದೈವವಿಲ್ಲ.

ದೈವ= ದೇವರು.

೩. ಅದು ಬೇಕು, ಇದು ಬೇಕು, ಎಂದೆಂಬ ಎದೆಗುಡಿಹತನ ಬೇಡ. ಹದುಳಿಗನಾಗಿದ್ದರೆ ಸಾಕು. ಪಡಿಪದಾರ್ಥ ತಾನಿದ್ದೆಡೆಗೆ ಬಹುದು. ನಿಧಿ ನಿಕ್ಷೇಪ ತಾನಿದ್ದೆಡೆಗೆ ಬಹುದು. ಹೃದಯಶುದ್ಧನಾಗಿ ಸಕಳೇಶ್ವರ ದೇವ ಶರಣೆಂದರೆ ನಿಜಪದವನೀವನು.

ಎದೆಗುಡಿಹತನ= ತಳಮಳಿಕೆ; ಹದುಳಿಗ= ಸಂತೋಷವುಳ್ಳವ, ಸಮಾಧಾನಿ; ಪಡಿ= ದಾನಕೊಟ್ಟಂಥಾದ್ದು; ನಿಧಿ= ದ್ರವ್ಯಸಂಚಯ; ನಿಕ್ಷೇಪ= ಇಡಲ್ಪಟ್ಟ ವಸ್ತು, ದ್ರವ್ಯ.

೪. ದೊರಕೊಂಡಂತೆ ಮನದಣಿದಿಪ್ಪವರ, ದುಃಖಕ್ಕೆ ದೂರಾಗಿಪ್ಪವರ, ಒಳಗನರಿದು ಹೊರಗೆ ಮರೆದಿಪ್ಪವರ, ಸದಾನಂದದಲ್ಲಿ ಸುಖಿಯಾಗಿಪ್ಪವರ ಎನಗೊಮ್ಮೆ ತೋರಾ ಸಕಳೇಶ್ವರದೇವಾ, ಎನಗಿದೇ ಪರವ ನೀವುದು ಕಂಡೆಯಾ ತಂದೆ.

ತಣಿ= ತೃಪ್ತಿಹೊಂದು.

೫. ಬೆಟ್ಟದ ಮೇಲಣ ಗಿಡಗಳು ಬೆಟ್ಟನ ಮುಟ್ಟದಿಪ್ಪವೇ ? ವಿಚಾರಿಸಿ ನೋಡಿದಡೆ ಸೃಷ್ಟಿಯೊಳಗಣ ಪ್ರಾಣಿಗಳು ಪರಮನ ಮುಟ್ಟದಿಪ್ಪವೇ ? ಕಷ್ಟರು ಬೇಡವೆಂದು ಬಿಟ್ಟೋಡುತಿಪ್ಪ ಪ್ರಾಣಿಗಳನಟ್ಟಿ ಹಿಡಿದು ಕೊಂದರೆ ಪ್ರತಿಷ್ಠಿಸಿದೀಶ್ವರನಿಕ್ಕದಿರ್ಪನೇ ನರಕದಲ್ಲಿ ? ಒಡೆಯರಿಲ್ಲೆಂದು ಹಲವು ಪ್ರಾಣಿಗಳ ಹರಿಹರಿದು ಕೊಂದರೆ ಹರನಿಕ್ಕದಿಪ್ಪನೇ ಅಘೋರ ನರಕದಲ್ಲಿ ? ಸಕಲ ಪ್ರಾಣಿಗಳಿಗೆ ಮೇಲಾರೈಕೆ ನಮ್ಮ ಸಕಳೇಶ್ವರನಿಗಲ್ಲದೆ ಮತ್ತೊಬ್ಬರಿಗುಂಟೇ ?

ಕಷ್ಟರು= ಕೆಟ್ಟ ಜನರು; ಪ್ರತಿಷ್ಠಿಸಿದ= ಶ್ರೇಷ್ಠನಾದ.

೬. ಜನಮೆಚ್ಚು ಶುದ್ಧನಲ್ಲದೆ ಮನಮೆಚ್ಚು ಶುದ್ಧನಲ್ಲವಯ್ಯ ! ನುಡಿಯಲ್ಲಿ ಜಾಣನಲ್ಲದೆ ನಡೆಯಲ್ಲಿ ಜಾಣನಲ್ಲವಯ್ಯ ! ವೇಷದಲ್ಲಿ ಅಧಿಕನಲ್ಲದೆ ಭಾಷೆಯಲ್ಲಿ ಅಧಿಕನಲ್ಲವಯ್ಯ ! ಧನ ದೊರಕದೆ ನಿಸ್ಪೃಹನಲ್ಲದೆ ಧನ ದೊರಕಿ ನಿಸ್ಪೃಹನಲ್ಲವಯ್ಯ ! ಏಕಾಂತದ್ರೋಹಿ, ಗುಪ್ತಪಾತಕಿ ಯುಕ್ತಿಶೂನ್ಯಂಗೆ ಸಕಳೇಶ್ವರ ದೇವರು ಒಲಿ ಒಲಿ ಎಂದರೆ ಎಂತೊಲಿವನಯ್ಯಾ ?

ನಿಸ್ಪೃಹ= ಆಶೆ ಇಲ್ಲದವ; ಏಕಾಂತದ್ರೋಹಿ= ಯಾವಾಗಲೂ ಮನಸ್ಸಿನಲ್ಲಿ ದ್ರೋಹವನ್ನು ಬಗೆಯುವವ.

೭. ಮನ ಮನವೇಕಾರ್ಥವಾಗದವರಲ್ಲಿ, ತನುಗುಣ ನಾಸ್ತಿಯಾಗದವರಲ್ಲಿ, ಶೀಲಕ್ಕೆ ಶೀಲ ಸಮಾನವಿಲ್ಲದವರಲ್ಲಿ, ಬುದ್ಧಿಗೆ ಬುದ್ಧಿ ಕೂಟಸ್ಥವಾಗದವರಲ್ಲಿ, ಭಾವಕ್ಕೆ ಭಾವ ತಾರ್ಕಣೆಯಾಗದವರಲ್ಲಿ, ಅವರೊಡನೆ ಕುಳ್ಳಿರಲಾಗದು. ಗಡಣದಲ್ಲಿ ಮಾತನಾಡಲಾಗದು. ಅದೇನು ಕಾರಣವೆಂದಡೆ, " ಸಂಸರ್ಗದೋಷ ಗುಣಾ ಭವಂತಿ " ಎಂದುದಾಗಿ ಮಹಂತ



ಸಕಳೇಶ್ವರದೇವ ಸಾತ್ವಿಕ ಸದುಭಕುತಿಯನರಿಯದವರ ಸಂಗದಿಂದ ಕೈಲಾಸಕ್ಕೆ ದೂರಾಗಿಪ್ಪನು.

ಏಕಾರ್ಥ= ಒಂದೇ ಅಭಿಪ್ರಾಯ, ಐಕ್ಯತೆ, ಪ್ರೇಮ; ಕೂಟಸ್ಥ= ಮೇಲೆ ನಿಲ್ಲುವದು, ಎಂದೂ ಬದಲಾಗದ ಸ್ಥಿತಿ; ತಾರ್ಕಣೆ= ಸರಿಯಾಗಿ ಕೂಡುವದು, ಸಂಘಟನೆ; ಗಡಣ= ಸಮೂಹ.

೮. ಕಾಮನೆಂಬ ಬಿಲ್ಲಾಳು ಉಂಟೆಂಬುದ ನಾವು ಕೇಳಿ ಬಲ್ಲೆವೈಸೆ. ಅವನೆಲ್ಲರನೆಸೆವ. ಅವನೆಸೆದುದು ದುರ್ಮಾರ್ಗಿಗಳನು ತಾಕಿಹುದು. ಸಕಳೇಶ್ವರನನರಿಯದ ನಿರ್ಭಾಗ್ಯರವರು.

ಬಿಲ್ಲಾಳು= ಬಾಣಹೊಡೆಯುವವ; ಎಸೆ= ಒಗೆ.

೯. ಮೊಲೆ ಮುಡಿ ಮುದ್ದು ಮುಖದ ಅಸಿಯ ನಡುವಿನವಳ ಕಂಡಡೆ ನಾನು ಮನದೊಳಗಳುಪದಿಪ್ಪೆನೇ ಅಯ್ಯ ? ತನುವಿನ ಮೇಲೆ ಬ್ರಹ್ಮಚರ್ಯತ್ವವಳವಟ್ಟರೇನು, ಮನದ ಮೇಲೆ ಬ್ರಹ್ಮಚರ್ಯತ್ವವಳವಡದನ್ನಕ್ಕ? ಸಕಳೇಶ್ವರದೇವನೇನರ್ಧನಾರಿಯಲ್ಲವೇ ?

ಅಸಿ= ಸಣ್ಣ, ಬಡಕ, ಕೃಶ; ಅಳುಪು= ಇಚ್ಛಿಸು.

೧೦. ಕಿವಿಯಲ್ಲಿ ಕೀಟಕ, ಕೊರಳಲೊಂದೊದರು, ತಲೆಯಲ್ಲಿ ಹುಳಿತದೊಂದೇರು, ನೋವನರಿಯದೆ ವಿಷಯಕ್ಕೆ ಹರಿವುದು ಸೊಣಗನು. ಬೆನ್ನಗಾಯ ನೆಲಕ್ಕದನು ನೂಕಲು, ಬರವೆಯ ಕಾಗೆ ಬಂದಿರಿಯಲು, ನೋವನರಿಯದೆ ವಿಷಯಕ್ಕೆ ಹರಿವುದು ಗಾರ್ದಭನು. ಹರೆಯ ಶಬುದಕ್ಕೆ ಬೊಬ್ಬೆಯ ರಭಸಕ್ಕೆ ತೊಟ್ಟೆಂಬು ತೊಡರುಚ್ಚಿ ಬೀಳಲು ನೋವನರಿಯದೆ ವಿಷಯಕ್ಕೆ ಹರಿವುದು ಹರಿಣನು. ಸಕಳೇಶ್ವರ ದೇವಾ ನೀ ಮಾಡಿದ ಮಾಯೆ ಆರಾರನಾಯತಗೆಡಿಸದು?

ಕೀಟಕ= ಹುಳ; ಏರು = ಗಾಯ; ಸೊಣಗ = ನಾಯಿ; ಗಾರ್ದಭ= ಕತ್ತೆ; ಹರೆ = ನಗಾರಿ; ತೊಡರು = ಬಂಧನ; ಹರಿಣ= ಚಿಗರೆ; ಆಯತ= ಒಳಗಾದದ್ದು ಅನುಕೂಲ್ಯತೆ.

೧೧. ಪರಮಾರ್ಥದ ಪರೀಕ್ಷೆಯನರಿಯದೆ ನಿಂದಿಸಿ ನುಡಿವರ ಕಂಡಡೆ ಏನೆಂಬೆ ? ಅರಳಿಯ ಮರನುಲುಹೆಂಬೆ. ಮೂಗ ಜಾತಿಯ ಶಬುದವೆಂಬೆನು.

ಸಕಳೇಶ್ವರದೇವಾ ನಿಮ್ಮನುಭಾವವನರಿಯದವರ ಕಂಡೆನಾದಡೆ, ಹಳಿ ಹಳಿ ಹಳಿ, ಎಂಬೆನು.

ಉಲುಹು= ಸಪ್ಪಳ; ಮೂಗ= ಮೂಕ; ಅನುಭಾವ= ಜ್ಞಾನ.

೧೨. ಬೆಚ್ಚಿನ ಮಡಕೆಯಂತೆ ನೆಲಿಸಿಕೊಂಡಿದ್ದಡೇನಯ್ಯ? ಆಲ ಬೀಳಲು ಬಿಟ್ಟು ಜೆಡೆಗಟ್ಟಿಕೊಂಡಿರ್ದರೇನು? ಕಂಥೆ ಬೊಂತೆಯ ಹೊದ್ದಿ ಚಿಂತಿಸುತ್ತಿರ್ದಡೇನು? ತನುಮನಧನವಂಚನೆ ಇಲ್ಲದ ಭಕುತನ ಮನವೆ ಮನೆಯ ಮಾಡಿಕೊಂಡಿಪ್ಪ ಸಕಳೇಶ್ವರದೇವ.

ಬೀಳಲು= ಮರದ ಜಡೆ; ಕಂಥೆ= ರಗಟೆ, ದಪ್ಪಾದ ಅರಿವೆ; ಬೊಂತೆ= ಹಚ್ಚಡ

೧೩. ಬಲೀಂದ್ರನ ಸಿರಿಯಿಂದಲಧಿಕರ ನಾನಾರನೂ ಕಾಣೆ. ಅಂತಹ ಸಂಪತ್ತು ಮೂರಡಿಗ್ಯೆದದೆ ಹೋಯಿತ್ತು. ಕೆಡುವಂತಿದ್ದಿತೇ ಕೌರವನ ರಾಜ್ಯ? ಮುಡಿವಂತಿದ್ದಿತೇ ರಾವಣನ ಬಲ್ಲಾಳಿಕೆ? ಪರಸ್ತ್ರೀ ಲಕ್ಷ್ಮೀದೇವಿ ಗೊಲಿದು ಒಂದು ನಿಮಿಷದಲ್ಲಿ ಮಡಿದ. ಇದು ಸತ್ಯ, ಇದು ಸತ್ಯ. ಸಿರಿ ಸೌಕರ್ಯವೆಂಬುದು ಆಕಾಶದ ರಚನೆ. ಇದನರಿತು ದೇಹದಿಚ್ಛೆಯನತಿಗಳೆದು ನಮ್ಮ ಸಕಳೇಶ್ವರ ದೇವಂಗೋತು ನಾನೆಂಬ ಭ್ರಮೆಯಳಿಯಾ ಮರುಳೇ.

ಮಡಿ= ನಾಶವಾಗು; ಬಲ್ಲಾಳಿಕೆ= ಸಾಮರ್ಥ್ಯ; ಅತಿಗಳೆ= ದೂರ ಸರಿಸು; ಓತು= ಒಲಿದು.

೧೪. ತಮ ತಮಗೆ ಸಮತೆಯ ಹೇಳಬಹುದಲ್ಲದೆ, ತಮ ತಮಗೆ ಸಮತೆಯ ನುಡಿಯಬಹುದಲ್ಲದೆ, ಕನಲಿಕೆಯ ಕಳೆದಿಪ್ಪರಾರು ಹೇಳಾ? ಒಬ್ಬರನೊಬ್ಬರು ಹಳಿಯದಿಪ್ಪವರಾರು ಹೇಳಾ? ಮುನಿಸ ಮುಂದಿಟ್ಟಿಪ್ಪರು. ಇದು ಯೋಗಿ ಮಹಾ ಯೋಗಿಗಳಿಗರಿದಪ್ಪುದು ನೋಡಾ. ಸಕಳೇಶ್ವರ ದೇವಾ ನೀ ಕರುಣಿಸಿದವರಿಗಲ್ಲದಿಲ್ಲ.

ಸಮತೆ= ಸಮಾಧಾನ; ಕನಲಿಕೆ= ಸಿಟ್ಟು; ಮುನಿಸು= ಸಿಟ್ಟು; ಅರಿದು= ಆಶ್ಚರ್ಯ, ದುರ್ಲಭ.



೧೫. ಕರ್ತನೊಬ್ಬನೇ ದೇವ. ಸತ್ಯವೇ ಸುಭಾಷೆ. ಭೃತ್ಯಾಚಾರವೇ ಆಚಾರವಯ್ಯ. ಮತ್ತೆ ದೇವರಿಲ್ಲ, ಮತ್ತೆ ಆಚಾರವಿಲ್ಲ. ಮತ್ತೆ ಸಭಾಷೆ ಎಂಬುದಿಲ್ಲ. ಮಹಂತ ಸಕಳೇಶ್ವರ ದೇವರನೊಲಿಸಿದ ಪುರಾತರ ಪಥವಿದು. ಅವಿತತವಿಲ್ಲದೆ ನಂಬುವುದು.

ಪಥ= ದಾರಿ; ಅವಿತತ= ಸಂಚಲವಿಲ್ಲದೆ, ಗಟ್ಟಿಯಾಗಿ.

೧೬. ಕಾಮದ ಕಳವಳದಲ್ಲಿ ಹುಟ್ಟಿ ಸಂಸಾರವ ತೊಟ್ಟು, ಲಿಂಗ ಮುಖ ಭವವನರಿಯದವರೆಲ್ಲರು ಅಂತಿರಲಂತಿರಲಿ! ಬ್ರಹ್ಮಪಾಶವ ಕೊರಳಲ್ಲಿ ಹಿಡಿಸಿಕೊಂಡು ವಿಷಯಾದಿಗಳ ಕೊಂಡವರಂತಿರಲಂತಿರಲಿ! ಚತುರ್ವೇದಶಾಸ್ತ್ರವನೋದಿ ಲಿಂಗ ಉಂಟು ಇಲ್ಲವೆಂಬ ಶ್ವಾನ ಜ್ಞಾನರಂತಿರಲಿ! ತನುವ ಹೊತ್ತು ತೊಳಲುವ ಕಾಲವಂಚಕಯೋಗಿಗಳೆಲ್ಲ ಅಂತಿರಲಂತಿರಲಿ! ಪಂಚ ಮಹಾಶೈವರು ಭ್ರಷ್ಟರಾಗಿ ಹೋದರು. ಇವರನೆಂತು ಸರಿ ಎಂಬೆನಯ್ಯಾ ಲಿಂಗವಂತಂಗೆ? ಅದ್ವೈತಿಗಳೆಲ್ಲ ಲಿಂಗಾರಾಧನೆ ಹುಸಿ ಎಂದು ಬುದ್ಧಿ ತಪ್ಪಿ ನುಡಿದು ಗಮನ ಕೆಟ್ಟು ಹೋದರು. "ಅದೃಶ್ಯಂಭಾವನಂ ನಾಸ್ತಿ ದೃಶ್ಯಮೇವ ವಿನಶ್ಯತಿ । ಅವರ್ಣ ಮಕ್ಷಯಂ ಬ್ರಹ್ಮ ಕಥಂಧ್ಯಾಯಂತಿ ಯೋಗಿನಃ ॥" ಎಂಮದಾಗಿ ಪರಬ್ರಹ್ಮ ನಾನೆಂದಡೆ ಶಿರವ ದಂಡವ ಕೊಂಡರು ಕೇಳಿರಣ್ಣಾ. ಬ್ರಹ್ಮಾದಿಗಳು ಲಿಂಗಕ್ಕೆ ದೂರವಾಗಿ ಹೋದರು. ಅಹಮ್ಮಿಲ್ಲದ ಕಾರಣ, ಸಕಳೇಶ್ವರಾ ನಿಮ್ಮ ಶರಣರು ಜಗದ್ವಂದ್ಯರಾದರು.

೧೭. ಎಕ್ಕೆ ಮಿನಿಕೆ ಮೊದಲಾಗಿ ಅವು ಪಕ್ವಕ್ಕೆ ಬಂದಡೆ ವಿಷ ಬಿಡುವುದೆ? ಸೋರೆ ಮಾರುಥಿಫಣಿ ಅವು ಹಿರಿದಾದಡೇನು? ಮನದಲ್ಲಿ ವಿಷ ಬಿಡದು. ಸಕಳೇಶ್ವರದೇವಾ ನಿಮ್ಮ ನಿಜವನರಿಯದ ಮನುಜಂಗೆ ನರೆ ಹಿರಿದಾದಡೇನು? ಮನದವಗುಣ ಬಿಡದು.

೧೮. ಗರ ಹೊಡೆದಂತೆ ಬೆರೆತುಕೊಂಡಿಪ್ಪರು. ಮರನನೇರಿ ಬಿದ್ದಂತೆ ಹಮ್ಮದಂಬೋಗಿಪ್ಪರು. ಉರಗನ ವಿಷವಾವರಿಸಿದಂತೆ, ನಾಲಿಗೆ ಹೊರಳದಂತೆ, ಕಂಗಾಣದಂತೆ. ನಿಮ್ಮ ಕರುಣವೇ ಕರ ಚೆಲುವು. ಸಕಳೇಶ್ವರಯ್ಯ ಸೊಕ್ಕಿನವನ ಪರಿ ಬೆರೆ.

ಗರ= ಗ್ರಹ, ಪಿಶಾಚಿ; ಬೆರೆ= ಸೊಕ್ಕಿನಿಂದ ನಡೆ, ಹಮ್ಮದ= ಎಚ್ಚರವಪ್ಪುವದು. ಉರಗ= ಹಾವು.

೧೯. ಸಂಸಾರವ ಬಿಟ್ಟುದೇ ಆಚಾರವಯ್ಯಾ. ಕಾಯದಿಚ್ಛೆಗೆ ಕಂಡವರಿಗೆ ಕಾರ್ಪಣ್ಯ ಬಡದಿಪ್ಪುದೇ ಶೀಲ. ಲಿಂಗಾಣತಿಯಿಂದ ಬಂದುದ ಕೈಕೊಂಬುದೇ ವ್ರತ. ಮನ ಘನವನಗಲದಿಪ್ಪುದೇ ಭಕ್ತಿ. ಸಕಳೇಶ್ವರದೇವಾ ನಿಮ್ಮನರಿದವನೇ ಶರಣ.

ಕಾರ್ಪಣ್ಯ= ಕೃಪಣತೆ, ಆಶೆ; ಆಣತಿ= ಆಜ್ಞೆ,

೨೦. ಸದ್ಭಕ್ತರಿಗೆ ಸಮಯೋಚಿತವ ಮಾಡುವವನ, .ಸದ್ಭಕ್ತರಿಗೆ ನೀಡಿ ತನ್ನ ಹಸಿವ ಮರೆದಿಪ್ಪವನ, ಸದ್ಭಕ್ತರಿಗೆ ಉಳ್ಳುದೆಲ್ಲವ ಕೊಟ್ಟು ಐದರೇ ಎಂದು ಮರುಗುವ, ಏಕೋಗ್ರಾಹಿ ಶರಣನ ತೊಟ್ಟನೆ ತೊಳಲಿ ಅರಸಿ ಕಾಣೆನು. ಮೂರು ತೆರದ ಮುಕ್ತಿಯಂತಪ್ಪ ವರವ ಕೊಟ್ಟೊಡೆ ಯೊಲ್ಲೆನು. ಜಂಗಮಲಿಂಗಕ್ಕೆ ಅರ್ಥ ಪ್ರಾಣಾಭಿಮಾನವ ಕೊಟ್ಟು, ಅಹಂಕಾರವಿಲ್ಲದಿಹಂತಹ ಪುರಾತನರ ಮನೆಯ ಬಚ್ಚಲ ಬಾಲಹುಳುವಾಗಿ ಹುಟ್ಟಿಸಯ್ಯಾ ಸಕಳೇಶ್ವರಾ, ನಿಮ್ಮ ಧರ್ಮ ನಿಮ್ಮ ಧರ್ಮ.

ಐ= ಬರು; ತೊಳಲು= ಅತ್ತಿತ್ತಹೋಗು, ಹುಡುಕಾಡು, ಶ್ರಮಪಡು.

೨೧. ಇದಿರೆನ್ನ ಹಳಿವರು ಮತಿಯ ಬೆಳಗುವರು. ಮನದ ಕಾಳಿಕೆಯ ಕಳೆವರೆನ್ನ ನೆಂಟರು. ದುರಾಚಾರದಲ್ಲಿ ನಡೆವರು ಕನ್ನಡಿ ಎನಗೆ, ಹೇಯೋಪಾಯವ ತೋರುವರು. ಇದು ಕಾರಣ ಅನ್ಯದೇಶಕ್ಕೆ ಹೋಗಲೊಲ್ಲೆ. ಸಕಳೇಶ್ವರ ದೇವರ ತೋರುವರೊಳರಿಲ್ಲಿಯೇ.

ಬೆಳಗು= ಸ್ವಚ್ಛಮಾಡು; ಕಾಳಿಕೆ= ಮಾಲಿನ್ಯ; ಕಳೆ= ದೂರ ಮಾಡು; ಒಳರು= ಶಕ್ತರು.

---

## ಭಕ್ತಿಯುಳ್ಳವನಾಗಿರುವುದು.

೨೨. ಯೋಗಿ ಜೋಗಿ ತಪಸಿ ಸನ್ಯಾಸಿ ಸುಳಿವರು ಕ್ಷುಧೆ ಕಾರಣ. ಇವರು ತೋರಿ ಮಾರಿಯುಂಬ ಬೆವಹಾರಿಗಳು. ನಿರ್ಣಯ ನಿರ್ಲೇಪ ಭಕ್ತಿಯುಳ್ಳವರನಲ್ಲದೊಲ್ಲ ಸಕಳೇಶ್ವರದೇವ.

ಕ್ಷುಧೆ= ಹಸಿವೆ; ಬೆವಹಾರಿ= ವ್ಯಾಪಾರಸ್ಥ; ನಿರ್ಲೇಪ= ಸಂಬಂಧವಿಲ್ಲದ.

೨೩. ಹೊಯಿದ ಹರೆಗೆ ಕುಣಿದಾಡುವರೆಲ್ಲ. ಹಾಡಿದ ಗೀತಕ್ಕೆ ತಲೆದೂಗುವರೆಲ್ಲ. ಪಂಜರದೊಳಗಣರಗಿಳಿಯಂತೆ. ಅದು ಆಡುವುದು ಹಾಡುವುದು. ಸಕಳೇಶ್ವರದೇವರಲ್ಲಿ ಅಭ್ಯಾಸಕ್ಕೆ ಮಜ್ಜನಕ್ಕೆರೆವರೆಲ್ಲ ಭಕ್ತರೇ?

ಹರೆ= ನಗಾರಿ,



೨೪. ಗಿರಿಯ ಕರದಿಂದೆತ್ತಿದಡೇನು? ಹರಿವ ವಾರುಧಿಯನಾಪೋಷಣವ ಮಾಡಿದಡೇನು? ಗಗನ ಗಮನದಲ್ಲಿ ಸುಳಿದಡೇನು? ಇವರೆಲ್ಲ ಉಪವಸದ ಬಳಿಯಲಭ್ಯಾಸಿಗಳು. ಅರ್ಚಿಸಿ ಪೂಜಿಸುವ ಮರ್ತ್ಯದ ಲೌಕಿಕರ ಮೆಚ್ಚ ಸಕಳೇಶ್ವರದೇವ ವೇಷ ಡಂಭಕರ.

ವಾರುಧಿ= ಸಮುದ್ರ; ಆಪೋಷಣ= ಸೀಪುವುದು, ಕುಡಿಯುವುದು.

೨೫. ಮುಟ್ಟದಡೆ ತಾನು ಮುಟ್ಟೆನೆಂಬುವನಲ್ಲ. ನಿಷ್ಠೆಯಲಿ ಕುಡದಿದ್ದಡೆ ಸಾಕೆಂಬುವ. ಆಗಮನವರಿಯದೆ, ಆಚಾರವ ಬೆರಿಸದೆ, ಪೂಜೆಯ ಕೈಕೊಂಬುವನಲ್ಲ. ಸಕಳೇಶ್ವರ ದೇವ ತಾನೊಲಿದವರನಲ್ಲದೆ ಒಲ್ಲದವರ ಮೆಚ್ಚನಯ್ಯ.

೨೬. ಸದ್ಭಕ್ತರು ಲಿಂಗಾರ್ಚನೆಯ ಮಾಡುವ ಕಾಲದಲ್ಲಿ ಕದವ ನುಚ್ಚಿ ಸಮಾಧಾನದಲ್ಲಿ ಲಿಂಗಾರ್ಚನೆಯ ಮಾಡುವುದು. ಪಾಪಿಯು, ಕೋಪಿಯು, ಶಿವಾಚಾರಪರಿಭ್ರಷ್ಟನು, ಅಳಿಗೊಂಬನು, ಹೊಲ್ಲಹ ದೃಷ್ಟಿಯಹನು, ಅನಾಚಾರಿಯು, ಮೂರ್ಖನು, ತನ್ನ ಗುರುವ ನಿಂದಿಸುವಾತನು, ಇಂತಪ್ಪವರುಗಳು ಪ್ರಮಾದದಿಂದಾದೊಡೆಯೂ ಕಂಡಡೆ ತಾ ಮಾಡಿದ ಲಿಂಗಾರ್ಚನೆ ನಿಷ್ಫಲವಹುದು. ಇದನರಿತು ಸಕಳೇಶ್ವರ ಲಿಂಗವ ಏಕಾಂತದಲ್ಲಿ ಭಜಿಸುವ ಭಕ್ತರಿಗೆ ನಮೋ ನಮೋ ಎಂದು ಬದುಕಿದೆನಯ್ಯಾ.

ಅಳಿಗೊಂಬ= ಕ್ರೂರ; ಹೊಲ್ಲಹ= ಅಯೋಗ್ಯ; ಪ್ರಮಾದದಿಂದ= ತಪ್ಪಿ.

೨೭. ಅಜಾತನು ಜಾತನ ಜಾತನೆಂಬೆನು. ಅಜಾತಂಗೆ ಕುಲಹೊಲೆ ಇಲ್ಲವೆಂಬೆನು. ಹಿರಿಯ ಮಹೇಶ್ವರನೆಂಬೆನು. ಸಮಯಾಚಾರವ ಬೆರಿಸಲಮ್ಮೆನು. ನಿಚ್ಚ ಪೂಜಿಸುವ ಪೂಜಕ ನಾನು. ಸಕಳೇಶ್ವರದೇವಾ ಎನ್ನ ನಾಚಿಸಬೇಡ.

ಸಮಯ= ಸಮಾಜ ಭೇದ; ಅಮ್ಮೆನು= ಸಮರ್ಥನಾಗೆನು; ನಿಚ್ಚ= ನಿತ್ಯ.

೨೮. ಅಪ್ಪವಿಧಾರ್ಚನೆ ಷೋಡಶೋಪಚಾರವ ಮಾಡುವ ದಿಬ್ಬಿಯ ಭಂಡರ ಕಂಡು ನಾಚಿತ್ತೆನ್ನ ಮನವು. ಉಪಚಾರವೇಕೋ ಶಿವಲಿಂಗದ ಕೂಡೆ? ಸಕಳೇಶ್ವರಯ್ಯ ಇಂತಪ್ಪ ಮಾದಿಗರಿಗೆ ಒಲಿಯಬಲ್ಲನೆ?

ದಿಬ್ಬಿ= ಎತ್ತರವಾದ ಸ್ಥಳ, ದಿನ್ನೆ; ಶ್ವಪಚ= ಹೊಲೆಯ.

೨೯. ಈರೇಳ್ನೂರು ವರುಷ ಮಜ್ಜನಕ್ಕೆರೆದು ವೃಥಾ ಹೋಯಿತ್ತಲ್ಲಾ! ಅದೆಂತೆಂದರಿಯದೆ ವೃಥಾ ಹೋಯಿತ್ತಲ್ಲಾ! ಅದೆಂತೆಂದರಿಯದೆ ವೃಥಾ ಹೋಯಿತ್ತಲ್ಲಾ! ಅಯ್ಯ ಎನ್ನ ತನುಮನಧನ ನಿಮ್ಮಲ್ಲಿ ಸ್ವಯವಾಗವಾಗಿ. ಅನುಭಾವಕ್ಕೊಳಗಾಗದೆ ಎನ್ನ ವಿಚಾರಿಸಿ ನೋಡಿಹೆನೆಂದಡೆ ಏನೂ ಇಲ್ಲ. ಸುಳುಹಿನೊಳಗೆ ಅರಿದಿಹೆನೆಂದಡೆ ಸುಳುಹಿಂಗೆ ಭಂಗವಾಯಿತ್ತು. ಎನಗಿನ್ನು ಸುಳುಹ ಹೇಳಾ ಸಕಳೇಶ್ವರಾ.

ಈರೇಳ್= ಹದಿನಾಲ್ಕು.

---

## ಪ್ರಾರ್ಥನೆಯ ವಚನಗಳು.

೩೦. ನೀನೆನ್ನನೊಲ್ಲದಿದ್ದರೆ ನಾನಾರ ಸಾರಿ ಬದುಕುವೆನಯ್ಯಾ? ನಿಮ್ಮಿಂದ ಅಧಿಕರುಂಟೇ ಹೇಳಾ? ತಲೆಯೂರಿ ತಪಸ್ಸಿನಲ್ಲಿದ್ದೊಡೆ ಅಲ್ಲಿ ಮೂರ್ತಿಯ ತೋರುವಾತನು ನೀನೇ. ಕಣ್ಣ ಮುಚ್ಚಿ ಕಮ್ಮರಿಯ ಹಾಯ್ದರೆಯೂ, ಅಲ್ಲಿ ಪದವಿಯ ಕೊಡುವನು ನೀನೇ. ನೀನು ಕರುಣಿಸುವನ್ನಕ್ಕರ ನಾನು ಹಿಂಗಿದೆನೇ ಹೇಳಾ ಸಕಳೇಶ್ವರಾ?

ಸಾರು= ಸಮೀಪಕ್ಕೆ ಬರು; ಕಮ್ಮರಿ= ಕೊಳ್ಳ, ತಗ್ಗು ಪ್ರದೇಶ.

೩೧. ಮಾಡುವ ಭಕ್ತಂಗೆ, ಕೊಡುವ ದೇವಂಗೆ, ಎಂದೆಂದಿಗೂ ಕೇಡಿಲ್ಲ. ಮಾಡಿರೋ ಮಾಡಿರೋ. ಎನಗೆ ಆಯಿತ್ತು, ಹೋಯಿತ್ತೆಂಬ ಚಿಂತೆ ಬೇಡ, ಸಕಳೇಶ್ವರದೇವರವರನರಿದು ಸಲುಹುವನಾಗಿ.



೩೨. ಅಯ್ಯಾ, ನಿಮ್ಮಲ್ಲಿ ಆಯುವ ಬೇಡುವೆನೇ? ಸಂಸಾರಕ್ಕಾನಂಜುವೆ. ಅಯ್ಯಾ, ನಿಮ್ಮಲ್ಲಿ ಶ್ರೀಯ ಬೇಡುವೆನೇ? ಪರಾಂಗನೆಯ ಪಾಪ. ಅಯ್ಯಾ, ನಿಮ್ಮಲ್ಲಿ ಮುಕ್ತಿಯ ಬೇಡುವೆನೇ? ಅದು ನಿಮ್ಮ ಪದವಿ. ಸಕಳೇಶ್ವರ ದೇವಾ ನಾನೇನುವನು ಒಲ್ಲೆ. ನಿಮ್ಮ ಶ್ರೀಪಾದಸೇವೆಯೇ ಸಾಕು.

ಶ್ರೀ= ಸಂಪತ್ತು.

೩೪. ಅಡವಿಗೆ ಹೋಗಿ ಏವೆನು? ಮನದ ರಜ ತಮ ಬಿಡದು. ಆಡಕಾವನ ನೋಡಿ ಗಿಡನ ಕಡಿದವನೆಂದು ಬೈದೆ. ಆಶ್ರಮವ ಕೆಡಿಸಿತ್ತಲ್ಲಾ. ಸಕಳೇಶ್ವರದೇವಾ ನಿನ್ನ ಮಾಯೆ ಎತ್ತ ಹೋದರೂ ಬೆನ್ನ ಬಿಡದು.

ಏವೆನು= ಏನು ಮಾಡಲಿ. ರಜ= ಧೂಳು, ಹೊಲಸು.

೩೫. ದೇಶ ದೇಶಾಂತರವ ತೊಳಲಿ ಬಳಲಿ, ಕೆಲರ ಹಳಿದು ಕೆಲರ ಹೊಗಳಿ, ವೃಥಾ ಹೋಯಿತ್ತೆನ್ನ ಸಂಸಾರ. ಗಿರಿಯ ಶಿಖರದ ಮೇಲೆ ಲಿಂಗಧ್ಯಾನದಲ್ಲಿ ಮೌನಿಯಾಗಿರಿಸು ಸಕಳೇಶ್ವರಾ.

೩೬. ದೇಹ ಧರ್ಮದಾಸೆ ಬೇರೆ. ಭಕ್ತಿ ಇಲ್ಲದ ಬಗೆ ಬೇರೆ. ಎನಗೆಂತು ಮಾಡಿದಿರೀ ಸಕಲ ಪ್ರಪಂಚುವನು? ಎನಗೆಂತು ಮಾಡಿದಿರೀ ಸಕಲ ವ್ಯಾಪಾರಂಗಳನು? ಎನಗೆ ನಿಶ್ಚಿಂತ ಪದವಿಯನಿನ್ನೆಂದಿಗೀವೆಯಯ್ಯಾ ಸಕಳೇಶ್ವರದೇವ?

೩೭. ಎನಗೆ ನೀನು ಮಾಡಿದ ಸಂಸಾರದ ಬಳಲಿಕೆ. ನಿನಗೆನ್ನ ಕಾಡುವ ಸಂಸಾರದ ಬಳಲಿಕೆ. ಬಳಲಿಕೆ ಇಬ್ಬರಿಗೆಯೂ ಸರಿ. ನಿನ್ನ ಹೆಚ್ಚೇನು. ಎನ್ನ ಕುಂದೇನು, ನೀನು ಭಕ್ತ ದೇಹಿಕ ದೇವನಾದ ಬಳಿಕ? ಸಕಳೇಶ್ವರದೇವ ನೀನೂ ಬಲ್ಲೆ, ನಾನೂ ಬಲ್ಲೆ.

೩೮. ಅರ್ಥಸನ್ಯಾಸಿ ಬ್ರಹ್ಮಚಾರಿಯಾನಯ್ಯಾ! ದೊರಕದಿರ್ದೊಡೆ ಒಲ್ಲೆನೆಂಬೆನು. ದಿಟಕ್ಕೆ ಬಂದೊಡೆ ಪರಿಹರಿಸಲರಿಯೆನು. ಎನಗೆ ನಿಷ್ಕ್ರಿಯೆಯ ದೆಸೆಯನೆಂದಿಂಗೀವೆಯಯ್ಯ ಸಕಳೇಶ್ವರಾ?

ಪರಿಹರಿಸು= ಬಿಟ್ಟುಬಿಡು; ದೆಸೆ= ಸ್ಥಿತಿ; ಈಯು= ಕೊಡು.

---

# ಮಹೇಶ್ವರ ಸ್ಥಲ.

## ಸ್ಥಿರಚಿತ್ತವುಳ್ಳವನಾಗಿರುವುದು.

೩೯. ವಲವನೆತ್ತಿಕೊಂಡ ಬಳಿಕ ಬಲುಹ ಸಲಿಸಲೇಬೇಕು. ತನ್ನ ಮನವ ತಾನರಿದು ಗೆಲಲೇ ಬೇಕು. ದೇವರೊಲವುಳ್ಳವರ ಕಂಡು, ತಾನಾ ದೆನೆಂದೊಡೆ ಚಲಿಸಕೂಡದು ಕಂಡಯ್ಯ. ನೇಮವೆಂದಡೆ ತಡೆ ಮುಟ್ಟಿಸ ಲೀಯೆ. ತಪ್ಪ ಹಿಡಿವೆ ನೀನು. ಇದು ಕಾರಣ ಪೆರತೊಂದನರಿಯದಂತಿ ರಿಸೆನ್ನ ಸಕಳೇಶ್ವರದೇವ.

ವಲ= ಸೈನ್ಯ; ಬಲುಹ= ಸಾಮರ್ಥ್ಯ; ಸಲಿಸು= ಒಪ್ಪಿಸು, ಹೊರ ಗೆಡುವು; ತಡೆ= ದಂಡೆ; ಪೆರತು= ಎರಡನೆಯದು.

೪೦. ಭಕ್ತಂಗೆ ಬೇಡದ ಭಾಷೆ, ನಿನಗೆ ಕೊಡದ ಭಾಷೆ. ಭಕ್ತಂಗೆ ಬಿಡದ ಭಾಷೆ, ನಿನಗೆ ಕಾಡುವ ಭಾಷೆ. ಭಕ್ತಂಗೆ ಸತ್ಯದ ಬಲ, ನಿನಗೆ ಶಕ್ತಿಯ ಬಲ. ಇಬ್ಬರ ಗೆಲಕ್ಕೆ ಕಡೆ ಇಲ್ಲ. ಈ ಇಬ್ಬರಿಗೆಯೂ ಒಡೆಯರಿಲ್ಲದ ಅಂಕ. ಇನ್ನು ಭಕ್ತನು ಭಕ್ತಿಯ ಛಲವ ಬಿಡನಾಗಿ, ಭಕ್ತ ಸೋತಡೆ ಭಕ್ತನಡಿಗೆ ಗೆಲವು. ಭಕ್ತ ಗೆದ್ದಡೆಂತು ಗೆಲವು? ಇದ ನೀನೇ ವಿಚಾರಿಸಿಕೊಳ್ಳಾ ಭಕ್ತದೇಹಿಕ ದೇವ ಸಕಳೇಶ್ವರಾ.

ಗೆಲ್ಲ= ಜಯ; ಅಂಕ= ಗುರುತು.

೪೧. ಜಗದ ಕಲ್ಲು ನೆಲಕ್ಕೆ ಬಿದ್ದರೆ ಕೆಲಕ್ಕೆ ಸಾರುವನೆಗ್ಗ! ನಗುತ್ತಲು ಕಲ್ಲೆಣಿಸದೆ ಶಿವ ಶರಣೆನುತ್ತಿಹುದು. ನಗುತ್ತಲು ಕಲ್ಲೆಣಿಸದೆ ಹರ ಶರಣೆ ನುತ್ತಿಹುದು. ಸಕಳೇಶ್ವರದೇವ ವಿಮುಖನಾದಡೆ ನೆನಹೆಂಬಲಗಿನಿಂದ ಕೈಮಾಡುತ್ತಿಹುದು.

ಎಗ್ಗ= ದಡ್ಡ; ವಿಮುಖ= ಹಿಂದೆಗೆಯುವದು; ನೆನಹು= ಧ್ಯಾನ; ಅಲಗು= ಬಾಣ.

೪೨. ಲೆಂಕನಾಗಲಿ, ಕಿಂಕರನಾಗಲಿ, ಶರಣನಾಗಲಿ, ಸಂದೇಹಿ ಯಾಗಲಿ, ದರ್ಶನ ಸ್ಪರ್ಶನವುಳ್ಳವರಾರಾದೊಡಾಗಲಿ, "ದುಶ್ಶೀಲ ಶೀಲ



ಯುಕ್ತೋ ವಾಯೋಃ ವಾಕೋಽಪ್ಯಸ್ಯಲಕ್ಷಣಂ ಭೂತಿಃ ಸಂಯುಕ್ತಂ ಸಂ ಪೂಜ್ಯೋರಾಜಾ ಪುತ್ರವತ್" ಎಂದುದಾಗಿ ಸಕಳೇಶ್ವರದೇವನಾರ ಮನದಲ್ಲಿ ಹೋಗಿದ್ದಾನೆಂದರಿಯಬಾರದು.

ಲೆಂಕ= ಸೇವಕ.

೪೩. ಸರ್ವಸಂಗ ಪರಿತ್ಯಾಗಿ ಎಂದೊಡೆ, ಭೋಗಕ್ಕೆ ಮರುಗಿಸುವೆ. ಪಾಕನೇಮಿ ಎಂದೊಡೆ ಷಡ್ರಸಕ್ಕೆ ಆಸಿಸುವೆ. ಮೌನವ್ರತಿ ಎಂದೊಡೆ, ಸನ್ನೆಯಲ್ಲಿ ಬೇಡಿಸುವೆ. ಬ್ರಹ್ಮಚಾರಿ ಎಂದೊಡೆ ಅಂಗನೆಯರಿಗೆರಗಿಸುವೆ. ಸಕಳೇಶ್ವರ ದೇವಾ ಎನ್ನನಳಿವಾಡಿ ಕಾಡುವೆ.

ಅಳಿವಾಡು= ನಾಶಮಾಡು, ತೊಂದರೆಕೊಡು.

೪೪. ಘನಕೆ ಘನ ಪದವಿಯ ಬಯಸೆನಾಗಿ ಎನ್ನ ಮನವ ನೀ ಬಲ್ಲೆ. ಭಕ್ತರಿಗೆ ಬೇಡಿದ್ದ ಕುಡುವ ವರದಾನಿ ನೀ ನೋಡಯ್ಯ! ಆನೇನುವ ಬೇಡೆ ನಾಗಿ ಸಕಳೇಶ್ವರದೇವ ಎನ್ನ ಮಾತ ಮನ್ನಿಸುವ.

೪೫. ಇಂಥವರ ದೆಸೆಯಿಂದ ಇಂತುಟಾದುದೆಂದು ಚಿಂತಿಸುತ್ತಿಪ್ಪ ಭಾಷೆಗೆಟ್ಟ ಮನದವ ನಾನಲ್ಲವಯ್ಯ! ಎನ್ನಲ್ಲಿದ್ದುದನು ನೀವೇ ಬಲ್ಲಿರಿ. ಬಹ ಅನುವನು ನೀವೇ ಬಲ್ಲಿರಿ. ಸಕಳೇಶ್ವರ ದೇವಾ ಎನ್ನ ಕಾವರು ನೀವೇ ಯಾಗಿ.

ಅನುವ= ಸೌಕರ್ಯ, ಲಾಭ.

೪೬. ಕಾಮಿಸಿ, ಕಲ್ಪಿಸಿ, ಭಾವಿಸಿ, ಬರಿದೆ ಬಳಲದಿರು. ಚಿಂತೆ ಮರುಳುತನ. ಅದೆಂತು ಬಂದುದನಂತೇ ಕಾಂಬುದು. ಚಿಂತೆ ಮರುಳುತನ. ಅಚಿಂತ್ಯ ಸಕಳೇಶ್ವರ ಮಾಡಿದಂತೆಯಲ್ಲದೆ ಎಂತು ಆಗದು. ಚಿಂತೆ ಮರು ಳುತನ.

ಬರಿದೆ= ವ್ಯರ್ಥವಾಗಿ.

೪೭. ದೇವರೆದ್ದ ತಾವು ಏಳುವೆವಯ್ಯ! ದೇವ ಬಿದ್ದ ತಾವು ಬೀಳುವೆವಯ್ಯ! ದೇವ ಸತ್ತ ತಾವು ಸಾವೆವಯ್ಯ! ದೇವ ಬದುಕಿದ ತಾವು ಬದುಕಿದೆವಯ್ಯ. ನಾವು ಸತ್ತು ದೇವ ಹಿಂದುಳಿದರೆ ಎನ್ನಿಂದ ವ್ರತಗೇಡಿ ಗಳಾರು ಹೇಳಾ ಸಕಳೇಶ್ವರದೇವ?

೨೮. ಶ್ವಾನ ಮುಟ್ಟಿದ ಪಾಯಸ ನೈವೇದ್ಯಕ್ಕೆ ಸಲ್ಲುವುದೇ? ಭಕ್ತಿ ಮಿಶ್ರವಾದಡೆ ಈಶ್ವರನೊಲಿವನೇ? ಅರಗು ಮಳಲು ಬೆರಸಿ ಉಕ್ಕ ಗೆಲುವಂತೆ ನಿಮ್ಮ ಬೆರಸಿದವರು ನಿಟ್ಟೂರಿಸದಿಹರೇ ಷಡುದರ್ಶನವ? ಸಾಗರವ ದಾಂಟುವವ ಬಸವನ ಬಾಲವ ಬಿಟ್ಟು ಮತ್ತೊಂದಕ್ಕೆ ಹರಿದು ಕಡಲನೊಡಗೂಡುವಂತೆ, ಶಿವಲಿಂಗದೇವನ ಪೂಜಾಕ್ರಿಯೆಯ ಮರೆದರೆ ಒಡಗೂಡದಿಹನೇ ಕರ್ಮದ ಕಡಲವ? ದಿಟಪುಟವಿಲ್ಲದ ಭಕ್ತಿಯ ಮೆಚ್ಚ ಸಕಳೇಶ್ವರದೇವ.

ಶ್ವಾನ= ನಾಯಿ; ನಿಟ್ಟೂರಿಸು= ಗಟ್ಟಿಯಾಗಿ ಒರಿಸು; ಕಡಲ= ಸಮುದ್ರ; ದಿಟಪುಟ= ನಿಶ್ಚಯ, ಗಟ್ಟಿತನ.

೨೯. ನಿನ್ನ ಹಂಗೇನು ಹರಿಯೆನು. ಅಂಜದೆ ನುಡಿವೆನು. ನೀ ಹೊರೆವ ಜಗವೆಲ್ಲ ಜೀವರಾಶಿಗಳ ಆಸೆಗೆ ಬೇರೆ ಕೊಟ್ಟು ಉಳ್ಳೊಡೆ ಹೇಳು ದೇವಾ! ಅರ್ಚಿಸಿ ಪೂಜಿಸಿ ಅದನು ಬೇಡಿದೆನಾದೊಡೆ ಬಾರದ ಭವಂಗಳಲ್ಲಿ ಎನ್ನ ಬರಿಸು ಸಕಳೇಶ್ವರದೇವ.

ಹೊರೆ= ಸಂರಕ್ಷಿಸು.

೩೦. ಕಾಯದಿಂದ ಗುರುವ ಕಂಡೆ. ಕಾಯದಿಂದ ಲಿಂಗವ ಕಂಡೆ. ಕಾಯದಿಂದ ಜಂಗಮವ ಕಂಡೆ. ಕಾಯದಿಂದ ಪ್ರಸಾದವ ಕಂಡೆ. ಕಾಯದಿಂದ ಸಕಳೇಶ್ವರ ದೇವರ ಪೂಜಿಸಿ ಸಾಧಕನಾದೆಯಲ್ಲಾ ಎಲೆ ಕಾಯವೇ.

---

## ಪ್ರಸಾದಿಸ್ಥಲ.

### ಲಿಂಗಾರ್ಪಣ ಭಾವವುಳ್ಳವನಾಗಿರುವುದು.

೩೧. ಆರುವನೊಲ್ಲೆನೆಂದು ಅರಣ್ಯಕ್ಕೆ ಹೋಹುದು ಕಾರ್ಯವಲ್ಲ. ದುರುಳುತನ. ಊರೊಳಗಿರ್ದರೆ ನರರ ಹಂಗು. ಅರಣ್ಯದೊಳಗಿರ್ದರೆ ತರುಗಳ ಹಂಗು. ಬಂದ ಪದಾರ್ಥವ ಲಿಂಗಾರ್ಪಿತವ ಮಾಡಿಕೊಂಬ ಶರಣನೇ ಜಾಣ ಸಕಳೇಶ್ವರಾ.

೩೨. ಎಡಗೆ ಸೋಂಕುವ ಸಕಲ ರುಚಿ ಪದಾರ್ಥಂಗಳನು ನಿನಗೆ ಕೊಡುವೆನೆಂದವಧಾನಿಸುವನ್ನಬರ ಎನಗೆ ಇಲ್ಲದೆ ಹೋಯಿತ್ತು, ನಿನಗೂ ಇಲ್ಲದೆ ಹೋಯಿತ್ತು. ಇಂತಪ್ಪ ಭೇದ ಬುದ್ಧಿಯ ಮಾಣಿಸಿ ಆನರಿದುದೇ ನೀನರಿದುದೆಂಬಂತೆ ಎನ್ನನೆಂದಿಂಗೆ ಇರಿಸುವೆಯಯ್ಯಾ ಸಕಳೇಶ್ವರಾ?

ಮಾಣಿಸಿ= ಬಿಡಿಸಿ.

೩೩. ಅಚ್ಚ ಪ್ರಸಾದಿ ಅಚ್ಚ ಪ್ರಸಾದಿಗಳೆಂದು ನಿಚ್ಚ ನಿಚ್ಚ ಹುಸಿವರು ನೋಡಾ! ಬಯಲ ಬೆರಸುವಲ್ಲಿ, ವಾಯು ಬೀಸುವಲ್ಲಿ, ಭಾಜನ ಸಹಿತ ಭೋಜನ ಉಂಟೇ? ಅಂಗನೆಯರ ಸುರತದ ಸುಖವನು ಲಿಂಗ ವಿರೋಧದಿಂದ ನೆರೆವ ನಿಚ್ಚಪರಾಧಿಗಳನೊಲ್ಲ ನಮ್ಮ ಸಕಳೇಶ್ವರದೇವರು.

ನೆರೆ= ಕೂಡು.

೩೪. ಆಚಾರವ ನುಡಿವೆ. ಅನಾಚಾರವ ನಡೆವೆ. ನಮಗೆ ನಿಮಗೆ ಪ್ರಸಾದ ಸ್ವಾಯತ ನೋಡಾ! ನಾನು ಭಕ್ತನೆಂಬ ನುಡಿಗೆ ಸಕಳೇಶ್ವರ ದೇವ ನಗುವ.

ಸ್ವಾಯತ= ಒಳಕೊಂಡ.

---

# ಪ್ರಾಣಲಿಂಗಿಸ್ಥಲ.

## ಪರಮಾತ್ಮನಲ್ಲಿ ಧ್ಯಾನವುಳ್ಳವನಾಗಿರುವುದು.

೫೫. ಗತಿ ಮತಿ ಚೈತನ್ಯ ಶಬ್ದ ಉಳ್ಳನ್ನಕ್ಕ ಕ್ರಿಯೆಂತಂತೆ ನಡೆವುದು. ಉರವಣೆ ಬೇಡ ಕಂಡೆಯಾ ಮನವೇ. ಎಲೆ ಮನವೇ, ಕ್ರಿಯೆಂತಂತೆ ನಡೆವುದು. ಹೂ ಮಿಡಿಯು ಹರಿವಡೆ ಹಣ್ಣಾಗಬಲ್ಲುದೇ? ಲಿಂಗದಲ್ಲಿ ಮನ ಲೀಯ್ಯವಾಗದನ್ನಕ್ಕ ದೇವ ಸಕಳೇಶ್ವರನೆಂತೊಲಿವ?

ಉರವಣೆ= ಮೇಲೆ ಹಾಯುವಿಕೆ, ತೊಂದರೆ.

೫೬. ಲಿಂಗವ ಭಾವ ಹಿಂಗದ ನಂಬಿಗೆ. ಅಂಗನೆಯರ ಮೊಲೆ ಲಿಂಗವಾಯಿತ್ತು. ಕಾಯ ಸಂಸಾರ ಸುಖವು. ಇದು ಕಾರಣ ಸಕಳೇಶ್ವರ ನಿಮ್ಮ ಶರಣರ ಕಾಮಿಗಳೆಂದೆನ್ನಬಹುದೇ ?

೫೭. ಜ್ಯೋತಿಯ ಮುಟ್ಟಿದ ಬತ್ತಿ ಎಲ್ಲ ಜ್ಯೋತಿಯಪ್ಪವಯ್ಯಾ! ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯಾ! ಪ್ರಸಾದವ ಮುಟ್ಟಿದ ಪದಾರ್ಥವೆಲ್ಲ ಪ್ರಸಾದವಪ್ಪವಯ್ಯಾ! ಲಿಂಗವ ಮುಟ್ಟಿದಂಗವೆಲ್ಲ ಲಿಂಗವಪ್ಪವಯ್ಯಾ! ಸಕಳೇಶ್ವರದೇವಾ, ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯಾ!

೫೮. ಸರ್ವ ಸಂಗ ಪರಿತ್ಯಾಗವ ಮಾಡಿ ಲಿಂಗಗೂಡಾಗಿ, ತನು ಪರಿಣಾಮವನೈದಿ, ಪೆರತೊಂದನರಿಯದೆ ಇರುವುದು ಎನ್ನಲಿಲ್ಲ. ಜಂಗಮದಲ್ಲಿ ತಕ್ಕ ಉಚಿತವ ಮಾಡಿ ನಿಮ್ಮ ಕರುಣವ ಪಡೆಯದ ಪಾಪಿ ನಾನಯ್ಯಾ. ಇಂತು ಎರಡಕ್ಕಲ್ಲದ ಉಭಯ ಭ್ರಷ್ಟ ನಾನು. ಸಕಳೇಶ್ವರದೇವನೊಲಿಯೊಲಿ ಎಂದೊಡೆ ಎಂತೊಲಿವನಯ್ಯಾ ?

ಪರಿಣಾಮ= ಸಂತೋಷ; ಮೇಣು= ಮತ್ತು.

೫೯. ಸುಖವನನುಭವಿಸಿಯಾನು ಸುಖದ ಹದನ ಕಂಡೆ. ದುಃಖವನನುಭವಿಸಿಯಾನು ದುಃಖದ ಹದನ ಕಂಡೆ. ಸಾಕೆಂದು ನಿಂದೆ, ನಿಭ್ರಾಂತನಾಗಿ. ಸಾಕೆಂದು ನಿಂದೆ, ಸಕಳೇಶ್ವರದೇವನಲ್ಲದೆ ಪೆರತೇನು ಇಲ್ಲವೆಂದು ಸಾಕೆಂದು ನಿಂದೆ.

ಹದ = ರೀತಿ, ಅನುಭವ.



೬೦. ಕುರುಹಿನ ರೂಹಿನ ಕೈಯ್ಯಲ್ಲಿ ದರ್ಪಣವಿದ್ದಲ್ಲಿ ಫಲವೇನು? ಒಂದಕ್ಕೆ ಜೀವವಿಲ್ಲ. ಒಂದಕ್ಕೆ ತೇಜವಿಲ್ಲ. ಕಾರಣವರಿಯದ ಕಾರಣ ಮನುಜರ ಕೈಯ್ಯಲ್ಲಿ ಲಿಂಗವಿರ್ದು ಫಲವೇನು ? ಅಂಗ ರಹಿತವಾದ ಸಂಗವನರಿಯರು. ಸಂಗ ರಹಿತವಾದ ಸುಖವನರಿಯರು. ನಿಸ್ಸಂಗಿ ನಿಂದ ನಿಲವ ಸಕಳೇಶ್ವರದೇವಾ ನಿಮ್ಮ ಶರಣ ಬಲ್ಲ.

ರೂಹು= ರೂಪು.

೬೧. ಪಿನಾಕಿಯಲ್ಲಿ ಪಲ್ಲಟವಿಲ್ಲದ ಪಂಚೈವರ ಪ್ರಾಣಂಗಳು ಸಂಚಗೆಡವೆ? ಹಲವು ಕಾಲ ಲಿಂಗದ ಮೇಲಣ ನೋಟ ಭಾವ ತಪ್ಪಿ ತನು ಉರುಳಿ ಲಿಂಗವ ಬೆರಸನೇ ಅನುಮಿಷನು? ಒಬ್ಬ ಜಂಗಮ ಮನೆಗೆ ಬಂದಡೆ ಇಲ್ಲೆಂದು ಕಳುಹಿದರೆ ಅಲ್ಲಿ ಹೋಗದೆ ಬಸವರಾಜನ ಪ್ರಾಣ? ಬರು ಗಳಪಿ ಬೇಳಂಬವಿಲ್ಲದೆ ಪರಮ ಪದವುಳ್ಳವರ ಮಹಾ ಬೆಳಗೊಳಕೊಳ್ಳದೆ, ತನ್ನಿಚ್ಛೆಯಲಾಗಿ ಹೋಗುತ್ತಿಪ್ಪವರ ಲಿಂಗದಿಚ್ಛೆಯನರಿಯದವರ ಕಂಡಡೆ ಮೆಚ್ಚುವನೇ ನಮ್ಮ ಸಕಳೇಶ್ವರದೇವ?

ಪಿನಾಕಿ= ಈಶ್ವರ; ಪಲ್ಲಟ= ಬದಲು; ಭೇದ; ಸಂಚ= ಮರ್ಮ; ಬರು= ವ್ಯರ್ಥ; ಗಳಪು= ವ್ಯರ್ಥವಾತಾಡು; ಬೇಳಂಬ= ಇಚ್ಛೆ, ಬಯಕೆ; ಬೆಳಗು= ಪ್ರಕಾಶ.

೬೨. ಏರಿಯ ಕಟ್ಟಬಹುದಲ್ಲದೆ, ನೀರ ತುಂಬಬಹುದೇ? ಕೈದುವ ಕೊಡಬಹುದಲ್ಲದೆ, ಕಲಿತನವ ಕೊಡಬಹುದೇ? ವಿವಾಹವ ಮಾಡಬಹುದಲ್ಲದೆ, ಪುರುಷತನವನರಸಬಹುದೇ? ಘನವ ತೋರಬಹುದಲ್ಲದೆ ನೆನಹ ನಿಲಿಸಬಹುದೇ? 'ಓದೋ ಕಾಲು, ಬುದ್ಧಿ ಮುಕ್ಕಾಲು' ಎಂಬ ಲೋಕದ ಗಾದೆ ಮಾತಿನಂತೆ ಸದ್ಗುರು ಕಾರುಣ್ಯವಾದರೂ ಸಾಧಿಸಿದವನಿಲ್ಲ ಸಕಳೇಶ್ವರಾ.

ಏರಿ= ಒಡ್ಡು.

೬೩. ಲಿಂಗದೊಳನುಭಾವ ಹಿಂಗಿದ ಕಾರಣ, ಅಂಗನೆಯರ ಮೊಲೆ ಲಿಂಗವಾದವು. ತನುವೇ ತನ್ನ ಸುಖ, ಮನವೇ ಪರಮ ಸುಖ. ಸಕಳೇಶ್ವರ ನಿಮ್ಮ ಶರಣರಲ್ಲಿ ಕಾಮಿ ಎಂಬರೇ ನಂಬಿಯಣ್ಣನ ?

ಅನುಭಾವ= ಜ್ಞಾನ.

೬೪, ಸರೋವರದ ಮಂಡುಕನು ತಾವರೆಯ ನೆಳಲ ಸಾರಿದಡೆ, ಪರಿಮಳವದಕೇ ಅಯ್ಯಾ? ಅ ಅ ಆ ಅ ಅರಿಯಬಾರದು. ಪರಿಮಳವದಕೇ ಅಯ್ಯಾ? ಅ ಅ ಅ ಅ ಅರಿಯಬಾರದು, ಮದಾಳಿಗಲ್ಲದೆ, ಸಕಳೇಶ್ವರದೇವಾ, ನಿಮ್ಮ ವೇದಿಸಿವ ವೇದ್ಯಂಗಲ್ಲದೆ.

೬೫. ಅಶನ ವ್ಯಸನಾದಿಗಳನಂತನಂತ. ಕಾಷಾಯಾಂಬರಧಾರಿಗಳನಂತನಂತ. ಸಕಳೇಶ್ವರದೇವಾ ನೀನಲ್ಲದೆ ಪೆರತನರಿಯದವರು ಎತ್ತಾನು ಒಬ್ಬರು.

೬೬. ಮೆಳೆಯ ಮೇಲೆ ಕಲ್ಲನಿಕ್ಕಿ, ಮೆಳೆ ಭಕ್ತನಾಗಬಲ್ಲುದೇ? ಮೇಹನಿಕ್ಕಿ ಮೆಯ್ಯನೊರಸಿದೊಡೆ ಪಶುಗಳು ಮೆಚ್ಚುವವು. ಅನ್ನವನಿಕ್ಕಿ ಹಿರಣ್ಯವ ಕೊಟ್ಟರೆ ಜಗವೆಲ್ಲ ಹೊಗಳುವುದು. ಒಳಗನರಿದು ಹೊರಗೆ ಮರೆವವರ ಎನಗೆ ನೀ ತೋರಾ ಸಕಳೇಶ್ವರಾ.

ಮೇಹ= ಮೇವು, ಆಹಾರ; ಹಿರಣ್ಯ= ಬಂಗಾರ.

೬೭. ಗಿರಿ ಗಗನ ಗಂಹ್ವರದೊಳಗಿರ್ದಡಲ್ಲೇನೋ? ಮನವು ಲೇಸಾವಡೆ ಸಾಲದೇ ? ಮನವು ಲೇಸಾಗಿರ್ದಡೆ ಸಾಲದೇ? ಪರಮ ಸುಖಿಯಾಗಿಪ್ಪ ಶರಣನ ಹೃದಯದಲ್ಲಿ ಸದಾ ಸನ್ನಿಹಿತ ಸಕಳೇಶ್ವರದೇವಾ.

ಗಂಹ್ವರ= ಗುಹೆ.

೬೮. ಚಂದ್ರೋದಯದಲುಂಬ ಚಕೋರಕೋಗರವ ಹಾಕಿ ಬಸಿರ ಬಡಿದುಕೊಂಡು ಉಣ್ಣದೆಂದಳುವರು ನೋಡಾ! ಲೋಕದ ಚಿಂತೆಯನ ಸಂತವನಾಡುವರಲ್ಲದೆ ತಮ್ಮ ಚಿಂತೆಯನಾಡರೊಪ್ಪಚ್ಚಿಯು ನೋಡಾ. ಮಹಂತ ಸಕಳೇಶ್ವರದೇವಾ ನಿಮ್ಮ ಶರಣರ ನಿಲವಿಂತಹುದಯ್ಯ.

ಓಗರ= ಅನ್ನ; ಬಸಿರ= ಹೊಟ್ಟೆ; ಒಪ್ಪಚ್ಚಿ =ಸ್ವಲ್ಪ, ತುಸು.

೬೯. ಮಗನಿಗೆ ತಂದೆಯಾಗಿರುವ. ತಂದೆಗೆ ಮಗನಾಗಿರುವ. ಹೆಂಡತಿಗೆ ಗಂಡನಾಗಿರುವ. ಊರಿಗೆ ಒಕ್ಕಲಾಗಿರುವ. ಮಸಣಕ್ಕೆ ಹೆಣನಾಗಿರುವ. ಸಕಳೇಶ್ವರ ದೇವ ನಿಮ್ಮ ಶರಣನ ಪರಿ ಬೇರೆ.

ಮಸಣ= ಶ್ಮಶಾನ.



೭೦. ಮನ ನಿಮ್ಮ ಬೆರಸಿದಡೆ, ಬಿನ್ನಾಣಕ್ಕೆ ಹೇಳುವನಲ್ಲ. ಅನುಪಮ ಭಕ್ತಿ ಸುಖ ಸಾರಾಯ ಸಮರ್ಥನಾಗಿ ತನುವಿಪ್ಪಂತೆ ಇಪ್ಪ ನೋಡಾ. ಮನುಜರ ಕಂಗಳಿಗೆ ಜ್ಞಾನಮೂರ್ತಿ ಜ್ಯೋತಿಯಂತಿರ್ಪ ಮಹಾಂತ ಸಕಳೇಶ್ವರದೇವನ ನಿಲವು.

ಬಿನ್ನಾಣ= ವಿಜ್ಞಾನ, ಯುಕ್ತಿ; ನಿಲವು= ಸ್ಥಿತಿ, ರೀತಿ.

The Vijay
LIBRA
VIJAY COLLEGE.
BIJAPUR.

# ಶರಣಸ್ಥಲ.

## ಶರಣನ ಲಕ್ಷಣಗಳು.

೭೧. ಶತವೇದಿ ಸಹಸ್ರವೇದಿಗಳು ಕಬ್ಬುನವ ಹೊನ್ನ ಮಾಡುವ ಸಿದ್ಧ ರಸವೇದಿಗಳಾದಡೇನಂತಿರಲಿ. ಚಂದನ, ಪರುಷ, ಕಾಗೆಯ ಹೊಂಬಣ್ಣವ ಮಾಡುವ ಮೇರುವಾದಡೇನಂತಿರಲಿ, ಅಂತಿರಲಿ. ಸಕಳೇಶ್ವರದೇವಾ ನಿಮ್ಮ ಶರಣ ಸ್ವತಂತ್ರ. ಘನವೇದಿ ಸ್ವರವೇದಿ ಶಬುದವೇದಿ ಎಂಬುವರು ಲಿಂಗವೇದಿ ಇವನಿಗೆಂತು ಸರಿ ಎಂಬೆ?

೭೨. ಪಶುವ ಮೃಗ ಬಂದು ನಿಂದಲ್ಲಿ ಜನ್ನ ಜಯವಾಗದೆ ಧರ್ಮಂಗೆ? ಲಿಂಗ ಜಂಗಮ ಭಕ್ತಿ ಪ್ರಜ್ವಲಿಸದೆ ಸಿರಿಯಾಳಂಗೆ? ಪ್ರಸಾದವ ಬಿಬ್ಬಿಬಾಚಯ್ಯ ಮೆರೆಯುತ ಬಪ್ಪಲ್ಲಿ ಅರಿಯದೆ ನಿಂದಿಸಿದಡೆ ಹರಿದು ಹತ್ತದೇ ಉರಿಯ ನಾಲಿಗೆ ಗ್ರಾಮದಿ? ಹರನಿತ್ತ ನಿರೂಪವಿಡಿಸಿದ ಮಾರ್ಗದಲ್ಲಿ ಮಾರಾರಿಯ ಶರಣರು ಬಂದು ನಿಂದಲ್ಲಿ, ಅರ್ಧಗೃಹಂಗಳುಳಿಯವೆ? ಸದ್ಯೋಜಾತ ಶರಣ ಧರೆಯಲುರಿಯ ನಾಲಿಗೆ. ಅಂಗಣವ ಮೆಟ್ಟಲಾಗದೆಂದಡೆ ಉರಿಯ ಜ್ವಾಲೆಯ ಬಿಟ್ಟಡೆ ಪರಿಹರವಾಗವೆ ಕುಂಚಿಗೆಯ ತುದಿಯಲ್ಲಿ? ಪರಮನೊಲಿದ ಶರಣರು ಸ್ವತಂತ್ರ ಮಹಿಮರು. ಅದೆಂತೆಂದಡೆ, ಅವರೆಂದಂತೆ ಆಹುದೆನ್ನಲು ಅಂಗದ ಮೇಲೆ ಲಿಂಗ ಪ್ರತಿಷ್ಠೆಯಾಗದೇ ಶಿವಯೋಗಿ ಸಿದ್ಧರಾಮಯ್ಯಂಗೆ? ಸಕಲ ದುರಿತಂಗಳು ಬಿಟ್ಟೋಡುತ್ತಿರ್ದವು, ಸಕಳೇಶ್ವರದೇವಾ ನಿಮ್ಮ ಶರಣನ ದೇವತ್ವಕಂಜಿ.

೭೩. ಉಡಲು ಸೀರೆಯ ಕಾಣದೆ ಬತ್ತಲೆ ಇಪ್ಪರಯ್ಯ. ಉಣಲಶನವ ಕಾಣದೆ ಹಸಿದಿಪ್ಪರಯ್ಯ. ಮೀಯಲೆಣ್ಣೆಯ ಕಾಣದೆ ಮಂಡೆ ಬೋಳಾಗಿಪ್ಪರಯ್ಯಾ? ದಿಟದಿ ಬಿಡಿಸಲಾರದೆ ಈ ಸಟೆಯ ಸಂಸಾರವ ಧರಿಸಿಪ್ಪವರಿಗಂಜುವೆ ಕಾಣಾ ಸಕಳೇಶ್ವರಾ.

ಮೀಯು= ಸ್ನಾನ ಮಾಡು.

೭೪. ಅಂಗದ ಗುಣವಳಿದು ಲಿಂಗಾಂಗಿಯಾದ ನಿಜಶರಣನು ಜಗದ ತಕ್ಕರಾದ ಜಂಗುಳಿಗಳ ಬಾಗಿಲುಗಳಿಗೆ ಹೋಗನು ನೋಡಾ.



ಹೋದೊಡೆ ಗುರುವಾಕ್ಯವಿಡಿದು ಹೋಗಿ, 'ಲಿಂಗಾರ್ಪಿತೆ ಭಿಕ್ಷಾ' ಎಂದು ಭಿಕ್ಷವ ಬೇಡಿ, ಲಿಂಗಾಣತಿಯಿಂದ ಬಂದ ಭಿಕ್ಷವ ಲಿಂಗ ನೆನಹಿಂದ ಲಿಂಗ ನೈವೇದ್ಯವಾಗಿ ಕೈಕೊಂಡು, ಬಂದ ಸ್ಥಲವನರಿದು, ಲಿಂಗಾರ್ಪಿತವ ಮಾಡಬೇಕು. ಅದೆಂತೆಂದೊಡೆ, "ರಾಜಾನ್ನಂ ನರಕಶ್ಚೈವ ಸೂತಕಾನ್ನಂ ತಥೈವ ಚ ಮೃತಾನ್ನಂ ವರ್ಜಯೇತ್ ಜ್ಞಾನೀ ಭಿಕ್ಷಾನ್ನಂ ಭುಂಜೀಯಾತ್ಸದಾ" ಇಂತೆಂದುದಾಗಿ, ಲಿಂಗಾಂಗಿಗೆ ಲಿಂಗಾಭಿಮಾನಿಗೆ ಲಿಂಗಪ್ರಾಣಿಗೆ ಇದೇ ಪಥವಯ್ಯಾ ಸಕಳೇಶ್ವರದೇವಾ ನಿಮ್ಮಾಣೆ.

ಜಂಗುಳಿ= ಸಮುದಾಯ ಗುಂಪು.

೭೫. ಶಿವಯೋಗಿ ಭಿಕ್ಷವ ಕೊಂಬಲ್ಲಿ ಜಾತಿ ಸೂತಕವಿಲ್ಲದಿರಬೇಕು. ಆಚಾರ ಸಂಕಲ್ಪವಿಲ್ಲದಿರಬೇಕು. ಶಿವಂಗೆ ಸಲ್ಲದ ದ್ರವ್ಯಕ್ಕೆ ಕೈಯ್ಯಾನದಿರಬೇಕು. ಇಂತೀ ಕ್ರಮವನರಿದು ಲಿಂಗನೈವೇದ್ಯ ಭಿಕ್ಷವ ಕೊಳಬಲ್ಲಡೆ ಆತನೇ ಶರಣ ಸಕಳೇಶ್ವರಾ.

ಆನು= ಕೊಡು.

೭೬. ಕಾಡ ಪತ್ರೆಯನಾ ಕೀಡಿ ತಿಂದಿರದೇ? ಉಡು ಏಕಾಂತ ನಿವಾಸಿಯೇ? ತೋಳ ದಿಗಂಬರಿಯೇ? ಎತ್ತು ಬ್ರಹ್ಮಚಾರಿಯೇ? ಬಾವುಲು ತಲೆ ಕೆಳಗಾಗಿರ್ದಡೆ ತಪಸಿಯೇ? ಸಕಳೇಶ್ವರ ದೇವಾ, ನಿಮ್ಮ ನಿಜವನರಿಯದವರು ಹೊರಹಂಚು ಒಳಬೊಳ್ಳೆ. ಅವರನೊಲ್ಲರು ಲಿಂಗೈಕ್ಯರು.

ಬಾವುಲು= ತೊಗಲಬಾವುಲಿ; ಹೊರಹೊಂಚು= ಹೊರಗಿನ ವೇಷ; ಒಳಬೊಳ್ಳೆ= ಒಳಗೆ ಪೊಳ್ಳಾದದ್ದು.

೭೭. ಭಕ್ತನೆಂಬೆನು ಬಸವಣ್ಣನ. ಶರಣನೆಂಬೆನು ಪ್ರಭುದೇವರ. ಐಕ್ಯನೆಂಬೆನು ಅಜಗಣ್ಣನ. ಹಿಂದೆ ಆದವರಿಲ್ಲ, ಇನ್ನುಮುಂದೆ ಅಹರಿಲ್ಲ. ಸಕಳೇಶ್ವರದೇವಾ ನಿಮ್ಮ ಶರಣರು ಮೂವರೇ.

೭೮. ಬ್ರಹ್ಮಾದಿಗಳು ಲಿಂಗಕ್ಕೆ ದೂರಾಗಿ ಹೋದರು. ಅಹಮ್ಮಿಲ್ಲದ ಕಾರಣ ಸಕಳೇಶ್ವರದೇವಯ್ಯ ನಿಮ್ಮ ಶರಣರು ಜಗವಂದ್ಯರಾದರು.

ಅಹಂ=ಸೊಕ್ಕು.

## ಐಕ್ಯಸ್ಥಲ.

೭೯. ದುಃಖ ಹೋಯಿತ್ತು, ತನ್ನಲ್ಲಿ ತಾನಿಲ್ಲವೆ. ಸುಖ ನಿಂದುದು ತನ್ನಲ್ಲಿ ತಾನು ನಿಜವಾಗಿ ನಿಂದವಂಗೆ, ಸಕಳೇಶ್ವರಯ್ಯನು ತಾನಾಗಿ ನಿಂದವಂಗೆ.

೮೦. ಮೃತ್ತಿಕೆ ಒಂದರಲಾದ ಭಾಂಡದಂತೆ, ಚಿನ್ನ ಒಂದರಲಾದ ಭೃಂಗಾರದಂತೆ, ಉದಕ ಒಂದರಲಾದ ವಾರಿಕಲ್ಲಂತೆ, ಬ್ರಹ್ಮದಿಂದಲಾದ ಜಗವು ಭಿನ್ನವೆಲ್ಲಿಯದು ಸಕಳೇಶ್ವರಯ್ಯಾ ?

ಮೃತ್ತಿಕೆ= ಮಣ್ಣು; ಬಂಗಾರ= ಆಭರಣ; ವಾರಿಕಲ್ಲು= ಆಣೇಕಲ್ಲು

೮೧. ಅರಿವನಾಹಾರಂಗೊಂಬುದೇ ಪರಮ ಸುಖ. ಮರವೆಗೆ ತೆರಹುಂಟೇ ಶಿವೈಕ್ಯಂಗೆ? ಇತರ ಸುಖ ಬೆವಹಾರ. ಅನುಹಿರಿಯರ ಸಂಗ ಸುಖವೇ ಆಹಾರ, ಶ್ರುತಿಯಿಂದತಿಶಯ. ಆ ಚರಿತ್ರನ ಮನವ ಮಹಂತ ಸಕಳೇಶ್ವರ ತಾನೇ ಬಲ್ಲ.

ತೆರಹು= ಸ್ಥಳ; ಬೆವಹಾರ= ವ್ಯಾಪಾರ, ಕಾರ್ಯ.

೮೨. ಸರ್ಪದಷ್ಟವಾದವರು ತಮ್ಮ ತಾವರಿಯರು. ಕಾಮದಷ್ಟವಾದ ಪಶು ಲಜ್ಜೆ ನಾಚಿಕೆಯ ತೊರೆವರು. ಸಂಸಾರದಷ್ಟವಾದವರು ಪರಮಾರ್ಥವನರಿಯರು. ಲಿಂಗದಷ್ಟವಾದರೆ ಅಂಗವೆನಲಿಲ್ಲ. ಆರಾಧ್ಯಪ್ರಿಯ ಸಕಳೇಶ ದೇವನಲ್ಲಿ ಸುಖಿಯಾಗಿಪ್ಪರು.

The Vijay College
L... Y.
VIJAY COLLEGE,
BIJAPUR.